# ಕುವೆಂಪು ವಿಶ್ವವಿದ್ಯಾಲಯ

# ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ಸಭಾ ದಿನಾಂಕ : 21–01–2021

ಪ್ರಾಧಿಕಾರಗಳ ವಿಭಾಗ

ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451
ಶಿವಮೊಗ್ಗ ಜಿಲ್ಲೆ.

J:VISHWA:UAT-I:BORDER

Scanned with CamScanner

ಫ್ಯಾಕ್ಸ್: 08282-256262
ಇ-ಮೇಲ್ :drsyndicateku@gmail.com

☎ 08282-256148 (ಪ್ರಾಧಿಕಾರಗಳ ವಿಭಾಗ)
ವೆಬ್‌ಸೈಟ್ :www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ- 577 451

ಸಂಖ್ಯೆ: ಕುವಿ:ಯುಎಟಿ-I: ೫೨೮ :2020-21 ದಿನಾಂಕ:05-02-2021

ಮಾನ್ಯರೆ,

ವಿಷಯ: ದಿನಾಂಕ:21-01-2021ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳು.

* * *

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ - 2000ರ ಪ್ರಕರಣ - 29(w)ರ ಪ್ರಕಾರ ರಚಿಸಲಾಗಿರುವ/ ಅನುಸರಿಸಲಾಗುತ್ತಿರುವ ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು, ಅಧ್ಯಾಯ-III ರ ಪ್ರಕರಣ- 16 ರನ್ವಯ **ದಿನಾಂಕ:21-01-2021 ರಂದು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ಕಡೂರು** - ಇಲ್ಲಿ ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ಕಳುಹಿಸಲು ನಿರ್ದೇಶಿತನಾಗಿದ್ದೇನೆ.

ವಿಶ್ವವಿದ್ಯಾಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು, ಅಧ್ಯಾಯ-IIIರ ಪ್ರಕರಣ-16 ರ ಪ್ರಕಾರ ಸದರಿ ನಡಾವಳಿಗಳು ತಲುಪಿದ 07 ದಿನಗಳೊಳಗೆ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ **ಆಕ್ಷೇಪಣೆ** ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

***ವಿ.ಸೂ: ಸದರಿ ನಡಾವಳಿಗಳು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಯಥವತ್ತಾಗಿ ಪ್ರಕಟಿಸಲಾಗಿದೆ.***

ತಮ್ಮ ವಿಶ್ವಾಸಿ,

(ಪ್ರೊ. ಎಸ್.ಎಸ್. ಪಾಟೀಲ್)
ಕುಲಸಚಿವರು

**ಕುಲಸಚಿವರು**
**ಕುವೆಂಪು ವಿಶ್ವವಿದ್ಯಾನಿಲಯ**
**ಜ್ಞಾನಸಹ್ಯಾದ್ರಿ**
**ಶಂಕರಘಟ್ಟ-577 451**
**ಶಿವಮೊಗ್ಗ ಜಿಲ್ಲೆ.**

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಪ್ರತಿಗಳು:

1) ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರದ ಸಚಿವಾಲಯಗಳು ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು.
3) ಆಯುಕ್ತರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
4) ಕುಲಸಚಿವರು(ಪರೀಕ್ಷಾಂಗ) ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
5) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
6) ನಿಕಾಯಗಳ ಡೀನರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
7) ಗ್ರಂಥಪಾಲಕರು, ವಿಶ್ವವಿದ್ಯಾಲಯ ಗ್ರಂಥಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
8) ನಿರ್ದೇಶಕರು, ಐ.ಕ್ಯೂ.ಎ.ಸಿ./ಪಿ.ಎಂ.ಇ/ ಸಿ.ಡಿ.ಸಿ/ ಶಾರೀರಿಕ ಶಿಕ್ಷಣ/ ವಿದ್ಯಾರ್ಥಿ ಕ್ಷೇಮಪಾಲನ/ ಪ್ರಸಾರಾಂಗ/ ದೂರ ಶಿಕ್ಷಣ ನಿರ್ದೇಶನಾಲಯ ವಿಭಾಗ, ಮಹಿಳಾ ಅಧ್ಯಯನ ಕೇಂದ್ರ, ಯು.ಸಿ.ಸಿ.ಎಫ್, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9) ***ನಿರ್ದೇಶಕರು/ಜೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್, ಯು.ಸಿ.ಸಿ.ಎಫ್. ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ - ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸೇರ್ಪಡಿಸುವುದು.***
10) ಎಲ್ಲಾ ಅಧ್ಯಕ್ಷರು, ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ./ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು.
11) ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರುಗಳು/ ಅಧೀಕ್ಷಕರುಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ/ಶಿವಮೊಗ್ಗ/ಕಡೂರು.
12) ಪ್ರಾಂಶುಪಾಲರು, ಸಹ್ಯಾದ್ರಿ ಕಲಾ ಕಾಲೇಜು / ಸಹ್ಯಾದ್ರಿ ವಿಜ್ಞಾನ ಕಾಲೇಜು/ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜು, ಶಿವಮೊಗ್ಗ.
13) ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಬಿ.ಹೆಚ್ ರಸ್ತೆ ಕಡೂರು.
14) ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ಐ.ಡಿ.ಎಸ್.ಜಿ ಕಾಲೇಜು ಕಟ್ಟಡ, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.
15) ಸಂಚಾಲಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಘಟಕ/ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಘಟಕ, ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಚಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
16) ಕಾರ್ಯಪಾಲಕ ಅಭಿಯಂತರರು, ಇಂಜಿನಿಯರಿಂಗ್ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
17) ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
18) ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು(ಮೌಲ್ಯಮಾಪನ):ಹಣಕಾಸು ಅಧಿಕಾರಿಗಳು. ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
19) ಕಛೇರಿ ಪ್ರತಿ / ರಕ್ಷಣಾ ಕಡತ.

SYD-PRO-COV-LETTER

Scanned with CamScanner

# ಕುವೆಂಪು ವಿಶ್ವವಿದ್ಯಾಲಯ

**ದಿನಾಂಕ:21–01–2021 ರಂದು ಗುರುವಾರ ಪೂರ್ವಾಹ್ನ 11.00 ಗಂಟೆಗೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ಕಡೂರು – ಇಲ್ಲಿ ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ನಡಾವಳಿಗಳು:**

**ಹಾಜರಿದ್ದ ಸದಸ್ಯರು:**

| | |
|---|---|
| 1. ಪ್ರೊ. ಬಿ.ಪಿ. ವೀರಭದ್ರಪ್ಪ, ಕುಲಪತಿಗಳು | ಅಧ್ಯಕ್ಷರು |
| 2. ಪ್ರೊ. ಎಸ್.ಎಸ್. ಪಾಟೀಲ್, ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 3. ಪ್ರೊ. ಪಿ. ಕಣ್ಣನ್, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 4. ಶ್ರೀ ಕೆ.ಸಿ. ವೀರಭದ್ರಯ್ಯ, ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 5. ಪ್ರೊ. ಕೃಷ್ಣ ವಿ. ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಡೀನರು. | ಸದಸ್ಯರು |
| 6. ಶ್ರೀ ಎನ್. ಆರ್. ಮಂಜುನಾಥ | ಸದಸ್ಯರು |
| 7. ಶ್ರೀ ಬಿ. ನಿರಂಜನ ಮೂರ್ತಿ | ಸದಸ್ಯರು |
| 8. ಶ್ರೀ ಹೆಚ್. ಬಿ. ರಮೇಶಬಾಬು | ಸದಸ್ಯರು |
| 9. ಶ್ರೀ ಬಳ್ಳೇಕೆರೆ ಸಂತೋಷ್ | ಸದಸ್ಯರು |
| 10. ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ | ಸದಸ್ಯರು |
| 11. ಶ್ರೀ ಧರ್ಮ ಪ್ರಸಾದ್ ಜಿ. | ಸದಸ್ಯರು |
| 12. ಶ್ರೀ ರಾಮಲಿಂಗಪ್ಪ ಹೆಚ್. | ಸದಸ್ಯರು |
| 13. ಶ್ರೀ ಎಸ್. ಆರ್. ನಾಗರಾಜ್ | ಸದಸ್ಯರು |
| 14. ಡಾ. ಎಸ್. ಅಬ್ದುಲ್ ಜಾವೀದ್, ಪ್ರಾಧ್ಯಾಪಕರು | ಸದಸ್ಯರು |
| 15. ಡಾ. ಯುವರಾಜ ಬಿ. ಹೆಚ್. ಪ್ರಾಂಶುಪಾಲರು | ಸದಸ್ಯರು |
| 16. ಶ್ರೀ ಕೆ. ವಿ. ಸತೀಶ್ ಪೈ., ಪ್ರಾಂಶುಪಾಲರು | ಸದಸ್ಯರು |
| 17. ಶ್ರೀ ಕರುಣಾಕರ ಬಿ., ಪ್ರಾಂಶುಪಾಲರು | ಸದಸ್ಯರು |
| 18. ಡಾ. ಹೆಚ್. ರಾಜೇಶ್ವರಿ, ಪ್ರಾಂಶುಪಾಲರು | ಸದಸ್ಯರು |

**ಗೈರುಹಾಜರಾದ ಸದಸ್ಯರು:**

1) ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
2) ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು.
3) ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
4) ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಪತಿಯವರು ಆತ್ಮೀಯವಾಗಿ ಸ್ವಾಗತ ಕೋರಿದರು. ಮುಂದುವರೆದು ಪ್ರಾಸ್ತಾವಿಕವಾಗಿ ಮಾತನಾಡಿದ ಕುಲಪತಿಗಳು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ದ ಪ್ರಕರಣ 28 (1) (ಎಫ್) ಪ್ರಕಾರ ಸಿಂಡಿಕೇಟ್‌ಗೆ ನೂತನವಾಗಿ ಪ್ರಾಂಶುಪಾಲರ ಜ್ಯೇಷ್ಠತೆಯಿಂದ ನಾಮ ನಿರ್ದೇಶನಗೊಂಡು ಪ್ರಥಮ ಸಿಂಡಿಕೇಟ್ ಸಭೆಗೆ ಆಗಮಿಸಿರುವ ಶ್ರೀ ಕರುಣಾಕರ. ಬಿ, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಳವರಸಿ, ಸಾಗರ, ಡಾ. ಹೆಚ್. ರಾಜೇಶ್ವರಿ, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಶಿರಾಳಕೊಪ್ಪ, ಡಾ. ಯುವರಾಜ. ಬಿ. ಹೆಚ್, ಪ್ರಾಂಶುಪಾಲರು, ಕದಂಬ ಪ್ರಥಮ ದರ್ಜೆ ಕಾಲೇಜು, ಶಿರಾಳಕೊಪ್ಪ ಹಾಗೂ ಶ್ರೀ ಕೆ.ವಿ. ಸತೀಶ್ ಪೈ, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾಳೆಬೈಲು, ತೀರ್ಥಹಳ್ಳಿ ಇವರುಗಳನ್ನು ಮಾನ್ಯ ಕುಲಪತಿಯವರು ಸ್ವಾಗತಿಸಿದರು.



Scanned with CamScanner

ಮುಂದುವರೆದು, ಮಾನ್ಯ ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವು ಕಡೂರಿನಲ್ಲಿ ಸ್ಥಾಪನೆಯಾದ ನಂತರ ಪ್ರಥಮ ಬಾರಿಗೆ ಸಿಂಡಿಕೇಟ್ ಸಭೆಯನ್ನು ಏರ್ಪಡಿಸಲಾಗಿದೆ ಎಂದರು. ಗ್ರಾಮ ಪಂಚಾಯತ್ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಸಿಂಡಿಕೇಟ್ ಸಭೆಯನ್ನು ನಿಗದಿತ ಸಮಯದಲ್ಲಿ ಏರ್ಪಡಿಸಲು ಸಾಧ್ಯಾವಾಗದೇ ಇರುವುದರಿಂದ ಈ ದಿನದ ಸಭೆಯಲ್ಲಿ ಚರ್ಚಿಸಿ ನಿರ್ಣಯ ಕೈಗೊಳ್ಳಬೇಕಾದ ಕಾರ್ಯಸೂಚಿಯು ಅಗಾದ ಪ್ರಮಾಣದಲ್ಲಿರುವುದರಿಂದ ಕಾರ್ಯಸೂಚಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿ ಎಲ್ಲರೂ ಮುಕ್ತವಾಗಿ ಚರ್ಚಿಸಿ ನಿರ್ಣಯ ಕೈಗೊಳ್ಳೋಣವೆಂದರು.

ವಿಶ್ವವಿದ್ಯಾಲಯದ ಸರ್ವತೋಮುಖ ಅಭಿವೃದ್ಧಿಗೆ ಎಲ್ಲಾ ಸಿಂಡಿಕೇಟ್ ಸದಸ್ಯರುಗಳು ಕೈಜೋಡಿಸಿ ಪ್ರಸ್ತುತ ವಿಶ್ವವಿದ್ಯಾಲಯವು 73ನೇ ಸ್ಥಾನದಲ್ಲಿರುವ ಎನ್.ಐ.ಆರ್.ಎಫ್ ರ್‍ಯಾಂಕಿಂಗನ್ನು 37 ಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ ಎಲ್ಲರೂ ಪ್ರಯತ್ನಿಸೋಣ ಎಂದರು.

ವಿಶ್ವವಿದ್ಯಾಲಯದ ಅಧ್ಯಾಪಕೇತರ ನೌಕರರ ಜ್ಯೇಷ್ಠತಾ ಪಟ್ಟಿಯನ್ನು ಸಿದ್ದಪಡಿಸಲು ಸಿಂಡಿಕೇಟ್‌ನಿಂದ ರಚಿತವಾದ ಪರಿಣಿತರ ಸಮಿತಿಯು ಕಾರ್ಯಾರಂಭ ಮಾಡಿದ್ದು ಆದಷ್ಟು ಬೇಗ ಈ ಸಮಸ್ಯೆಯು ಬಗೆಹರಿಯುವ ವಿಶ್ವಾಸವಿದೆ ಎಂದರು. ನಂತರದಲ್ಲಿ, ದಿನಾಂಕ:16–10–2020 ರಂದು ಮುಂದೂಡಲ್ಪಟ್ಟ ಸಭೆಯ ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

ಸಭೆಯ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳುವ ಪೂರ್ವದಲ್ಲಿ ಸದಸ್ಯರಾದ ಶ್ರೀ ರಾಮಲಿಂಗಪ್ಪ, ಹಾಗೂ ಶ್ರೀ ಬಳ್ಳೇಕೆರೆ ಸಂತೋಷ್ ಇವರುಗಳು ಕಾರ್ಯಸೂಚಿಯನ್ನು ಕ್ರಮವಾಗಿ ಸೇರ್ಪಡೆಗೊಳಿಸಿರುವುದಿಲ್ಲವೆಂದರು, ಮೊದಲು ಈ ಸಭೆಯ ಕಾರ್ಯಸೂಚಿಯನ್ನು ಸೇರಿಸಿ ನಂತರ ಹಿಂದಿನ ಸಭೆಯ ಕಾರ್ಯಸೂಚಿಯನ್ನು ಸೇರ್ಪಡೆಗೊಳಿಸಬೇಕಾಗಿತ್ತು ಎಂದರು. ಇದಕ್ಕೆ ಸದಸ್ಯರಾದ ಶ್ರೀ ಹೆಚ್.ಬಿ.ರಮೇಶ್ ಬಾಬು ಇವರು ಸಹಮತ ವ್ಯಕ್ತಪಡಿಸಿದರು. ಇದಕ್ಕೆ ಉತ್ತರಿಸಿದ ಕುಲಸಚಿವರು ಈ ಹಿಂದಿನ ಸಿಂಡಿಕೇಟ್ ಸಭೆಯ ಕಾರ್ಯಸೂಚಿಯು ಪೂರ್ಣಗೊಳ್ಳದೇ ಮುಂದೂಡಿರುವುದರಿಂದ ವಿಶ್ವವಿದ್ಯಾಲಯದ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮದ ಪ್ರಕಾರವೇ ಕಾರ್ಯಸೂಚಿಯನ್ನು ಸಿದ್ದಪಡಿಸಲಾಗಿದೆ ಎಂದರು. ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

## ದಿನಾಂಕ: 16–10–2020 ರ ಸಿಂಡಿಕೇಟ್ ಸಾಮಾನ್ಯ ಸಭೆಯ ಮುಂದೂಡಿದ ವಿಷಯಗ್ಗಳು

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

**2020ಸಿ05.04(ಎ):** ಹೊರಗುತ್ತಿಗೆ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಮೆ: ಕೆ.ಎಸ್.ಎಫ್–9, ಕಾರ್ಪೋರೇಟ್ ಸರ್ವಿಸ್, ಪ್ರೈ.ಲಿ., ಬೆಂಗಳೂರು ಇವರಿಂದ ಪಡೆದಿರುವ ಬಗ್ಗೆ.

**ಚರ್ಚೆ:** ವಿಷಯ ಮಂಡಿಸಿ ಮಾತನಾಡಿದ ಕುಲಸಚಿವರು ಈ ವಿಷಯದ ಕುರಿತು ಈಗಾಗಲೇ ಹಿಂದಿನ ಸಭೆಯಲ್ಲಿ ಸಾಕಷ್ಟು ಚರ್ಚೆಯಾಗಿದ್ದು ನಿರ್ಣಯವನ್ನು ಮುಂದೂಡಲಾಗಿರುವುದರಿಂದ ವಿಷಯವನ್ನು ಮತ್ತೆ ಮಂಡಿಸಲಾಗಿದೆ ಎಂದರು. ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರುಗಳಾದ ಶ್ರೀ ಬಳ್ಳೇಕೆರೆ ಸಂತೋಷ್, ಶ್ರೀ ರಾಮಲಿಂಗಪ್ಪ ಹೆಚ್ ಹಾಗೂ ಶ್ರೀ ಧರ್ಮ ಪ್ರಸಾದ್ ಜಿ. ರವರು ಈ ಹೊರಗುತ್ತಿಗೆ ಸಂಸ್ಥೆಯ ಕಾರ್ಯವೈಖರಿಯ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಹಾಗೂ ಸಂಸ್ಥೆಯ ಹೊರಗುತ್ತಿಗೆಯನ್ನು ರದ್ದುಪಡಿಸುವಂತೆಯೂ ಆಗ್ರಹಿಸಿದರು. ಇದಕ್ಕೆ ಶ್ರೀ ಹೆಚ್. ಬಿ. ರಮೇಶ ಬಾಬುರವರು ಧ್ವನಿಗೂಡಿಸಿದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ವಿಶ್ವವಿದ್ಯಾಲಯದಲ್ಲಿ ಮಾನವ ಸಂಪನ್ಮೂಲ ಸೇವೆಯನ್ನು ನೀಡುತ್ತಿರುವ ಮೆ: ಕೆ.ಎಸ್.ಎಫ್–9, ಕಾರ್ಪೋರೇಟ್ ಸರ್ವಿಸ್, ಪ್ರೈ.ಲಿ., ಬೆಂಗಳೂರು ಇವರ ಹೊರಗುತ್ತಿಗೆಯನ್ನು



Scanned with CamScanner

ದಿನಾಂಕ:31-03-2021 ರವರೆಗೆ ಮಾತ್ರ ನೀಡಿ, ನಂತರ ನಿಯಮಾನುಸಾರ ರದ್ದುಪಡಿಸಲು ನಿರ್ಣಯಿಸಲಾಯಿತು.

**2020-ಸಿಂ-5.04(ಬಿ):** ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಕನಿಷ್ಠ ವೇತನ ದರಗಳಂತೆ "ಸಿ", "ಡಿ" ಮತ್ತು ಇತರೆ ದರ್ಜೆಯ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಮೇ॥ ಕೆ.ಎಸ್.ಎಫ್-9, ಬೆಂಗಳೂರು ಈ ಸಂಸ್ಥೆಯಿಂದ ಪಡೆಯುತ್ತಿರುವ ಬಗ್ಗೆ.

**ಚರ್ಚೆ:** ವಿಷಯ ಮಂಡಿಸಿ ಮಾತನಾಡಿದ ಕುಲಸಚಿವರು ಈ ವಿಷಯದ ಕುರಿತು ಈಗಾಗಲೇ ಹಿಂದಿನ ಸಭೆಯಲ್ಲಿ ಸಾಕಷ್ಟು ಚರ್ಚೆಯಾಗಿದ್ದು ನಿರ್ಣಯವನ್ನು ಮುಂದೂಡಲಾಗಿರುವುದರಿಂದ ವಿಷಯವನ್ನು ಮತ್ತೆ ಮಂಡಿಸಲಾಗಿದೆ ಎಂದರು. ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರುಗಳಾದ ಶ್ರೀ ಬಳ್ಳೇಕೆರೆ ಸಂತೋಷ್ ಹಾಗೂ ರಾಮಲಿಂಗಪ್ಪ. ಹೆಚ್ ಹಾಗೂ ಶ್ರೀ ಧರ್ಮ ಪ್ರಸಾದ್. ಜಿ. ರವರು ಈ ಹೊರಗುತ್ತಿಗೆ ಸಂಸ್ಥೆಯ ಕಾರ್ಯವೈಖರಿಯ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಹಾಗೂ ಸಂಸ್ಥೆಯ ಹೊರಗುತ್ತಿಗೆಯನ್ನು ರದ್ದುಪಡಿಸುವಂತೆಯೂ ಆಗ್ರಹಿಸಿದರು. ಇದಕ್ಕೆ ಶ್ರೀ ಹೆಚ್. ಬಿ. ರಮೇಶ ಬಾಬುರವರು ಧ್ವನಿಗೂಡಿಸಿದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ವಿಶ್ವವಿದ್ಯಾಲಯದಲ್ಲಿ "ಸಿ", "ಡಿ" ಮತ್ತು ಇತರೆ ದರ್ಜೆಯ ಸಿಬ್ಬಂದಿಗಳ ಸೇವೆಯನ್ನು ನೀಡುತ್ತಿರುವ ಮೆ॥ ಕೆ.ಎಸ್.ಎಫ್-9, ಕಾರ್ಪೋರೇಟ್ ಸರ್ವಿಸ್, ಪ್ರೈ.ಲಿ., ಬೆಂಗಳೂರು ಇವರ ಹೊರಗುತ್ತಿಗೆಯನ್ನು **ದಿನಾಂಕ:31-03-2021 ರವೆರೆಗೆ** ಮಾತ್ರ ನೀಡಿ, ನಂತರ ನಿಯಮಾನುಸಾರ ರದ್ದುಪಡಿಸಲು ನಿರ್ಣಯಿಸಲಾಯಿತು.

## ದಾಸ್ತಾನು ಮತ್ತು ಖರೀದಿ ವಿಭಾಗ

**2020-ಸಿಂ-6.08:** ದಿನಾಂಕ:31-08-2020 ರಂದು ನಡೆದ ಖರೀದಿ ಸಮಿತಿ ಸಭೆ ನಡಾವಳಿ ಅನುಮೋದನೆ.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ದಿನಾಂಕ:31-08-2020 ರಂದು ನಡೆದ ಖರೀದಿ ಸಮಿತಿ ಸಭೆಯ ನಡಾವಳಿಯನ್ನು ಯಥಾವತ್ತಾಗಿ ಅನುಮೋದಿಸಲಾಯಿತು.

## ಪರೀಕ್ಷಾ ವಿಭಾಗ

**2020-ಸಿಂ-6.17:** E-Governance ಸೇವೆಗಳಿಗೆ ಸಂಬಂಧಿಸಿದ ಇ-ಟೆಂಡರ್ ಪ್ರಕ್ರಿಯೆಯನ್ನು ಸ್ಥಿರೀಕರಣಕ್ಕಾಗಿ ಮಂಡಿಸುತ್ತಿರುವ ಕುರಿತು.

**ಚರ್ಚೆ:** ಸದಸ್ಯರಾದ ಶ್ರೀ ಬಳ್ಳೆಕೆರೆ ಸಂತೋಷ್ ಇವರು ಮಾತನಾಡುತ್ತಾ, ಇಂತಹ ಸಾಫ್ಟ್‌ವೇರ್ ಅನ್ನು ಸಿದ್ದಪಡಿಸಲು ವಿಶ್ವವಿದ್ಯಾಲಯದಲ್ಲಿ ಸಾಕಷ್ಟು ಪರಿಣಿತಿ ಹೊಂದಿರುವವರ ಸೇವೆಯನ್ನು ಬಳಸಿಕೊಂಡು ಸಿದ್ದಪಡಿಸಿ ಅದನ್ನು ಉಪಯೋಗಿಸಿದಲ್ಲಿ ಅಗಾಧ ಪ್ರಮಾಣದ ಹಣವು ವಿಶ್ವವಿದ್ಯಾಲಯಕ್ಕೆ ಉಳಿತಾಯವಾಗುವುದು ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಕುಲಸಚಿವ(ಮೌಲ್ಯಮಾಪನ) ಇವರು ತಾಂತ್ರಿಕವಾಗಿ ಸಂಸ್ಥೆಯು ಸಿದ್ದಪಡಿಸಿರುವ ಸಾಫ್ಟ್‌ವೇರ್ ಮಾದರಿಯಲ್ಲಿ ಬೇರೆಯವರು ಸಿದ್ದಪಡಿಸಲು ಅಥವಾ ಪರವಾನಿಗೆ ಇಲ್ಲದೇ ಬಳಸಲು ಅವಕಾಶವಿರುವುದಿಲ್ಲವೆಂದರು. ಇದಕ್ಕೆ ಎಲ್ಲಾ ಸದಸ್ಯರುಗಳು ಈ ರೀತಿಯ ಸಾಫ್ಟ್‌ವೇರ್ ಅನ್ನು ಸಿದ್ದಪಡಿಸಲು ಇರುವ ಸಾಧ್ಯ ಸಾಧ್ಯತೆಯ ಬಗ್ಗೆ ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಿ ಸಮಿತಿಯು ಅವಕಾಶವಿದೆಯೆಂದು ವರದಿ ನೀಡಿದರೆ ಅದರಂತೆ ಕ್ರಮಕೈಗೊಳ್ಳಬಹುದು. ಇಲ್ಲವಾದರೆ ಮತ್ತೊಂದು ಟೆಂಡರ್ ಕರೆದು ಮುಂದಿನ ಕ್ರಮಕೈಗೊಳ್ಳಬಹುದು ಎಂದರು.



Scanned with CamScanner

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ e-governance ಸೇವೆಗಳಿಗೆ ಸಂಬಂಧಿಸಿದ ಇ-ಟೆಂಡರ್ ಅನ್ನು 2020-21 ನೇ ಶೈಕ್ಷಣಿಕ ವರ್ಷದವರೆಗೆ ಮಾತ್ರ ಅನುಮತಿ ನೀಡಲು ಹಾಗೂ ಚರ್ಚೆಯಲ್ಲಿ ವಿವರಸಿದಂತೆ ಕ್ರಮಕೈಗೊಳ್ಳಲು ಕೆಳಕಂಡಂತೆ ಸಮಿತಿಯನ್ನು ರಚಿಸಲು ನಿರ್ಣಯಿಸಲಾಯಿತು.

1. ಶ್ರೀ ಧರ್ಮಪ್ರಸಾದ್ ಜಿ., ಸಿಂಡಿಕೇಟ್ ಸದಸ್ಯರು – ಅಧ್ಯಕ್ಷರು
2. ಶ್ರೀ ಬಳ್ಳೆಕೆರೆ ಸಂತೋಷ್, ಸಿಂಡಿಕೇಟ್ ಸದಸ್ಯರು – ಸದಸ್ಯರು
3. ಶ್ರೀ ರಾಮಲಿಂಗಪ್ಪ ಹೆಚ್., ಸಿಂಡಿಕೇಟ್ ಸದಸ್ಯರು – ಸದಸ್ಯರು
4. ಕಂಪ್ಯೂಟರ್ ಸೈನ್ಸ್ ವಿಭಾಗದ ಪರಿಣಿತರು – ಸದಸ್ಯರು
   (ಕುಲಸಚಿವ (ಮೌಲ್ಯಮಾಪನ) ಸೂಚಿಸುವ)

## <u>ದಿನಾಂಕ:21-01-2021 ರ ಸಿಂಡಿಕೇಟ್ ಸಾಮಾನ್ಯ ಸಭೆಯ ವಿಷಯಗಳು</u>

### <u>ಪ್ರಾಧಿಕಾರಗಳ ವಿಭಾಗ</u>

**2021-ಸಿಂ-1.01:** ದಿನಾಂಕ:08-10-2020 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭಾ ನಡಾವಳಿಗಳ ಧೃಢೀಕರಣ.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:08-10-2020 ರಂದು ನಡೆದ ಸಿಂಡಿಕೇಟ್ ಸಾಮನ್ಯ ಸಭಾನಡಾವಳಿಯನ್ನು ಧೃಢೀಕರಿಸಲಾಯಿತು.

**2021-ಸಿಂ-1.02:** ದಿನಾಂಕ:16-10-2020 ರಂದು ನಡೆದ ಸಿಂಡಿಕೇಟ್‌ನ ಸಾಮಾನ್ಯ ಸಭಾ ನಡಾವಳಿಗಳ ಧೃಢೀಕರಣ. (ದಿನಾಂಕ:08-10-2020ರ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ಮುಂದುವರೆದ ಭಾಗ)

**ಚರ್ಚೆ:** ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ ರವರು ಮಾತನಾಡುತ್ತಾ, ಸದರಿ ನಡಾವಳಿಯಲ್ಲಿ ನಿರ್ಣಯ ಸಂಖ್ಯೆ: 2020-ಸಿ-6.04(ಇ) ರಲ್ಲಿ ದಿನಾಂಕ:10-09-2020 ರ ಸಮಿತಿ ಸಭೆಯಲ್ಲಿ ಈ ಸೌಲಭ್ಯವನ್ನು ವಿಶ್ವವಿದ್ಯಾಲಯದ ಸಿಬ್ಬಂದಿಗಳಿಗೆ ಮಾತ್ರ ಎಂಬುದನ್ನು ಕೈಬಿಟ್ಟು ವಿಲೀನೀಕರಣಗೊಂಡ ಎಲ್ಲಾ ಸಿಬ್ಬಂದಿಗಳಿಗೆ ಎಂಬುದನ್ನು ಸೇರ್ಪಡೆ ಮಾಡಬೇಕಾಗಿದೆ ಎಂದರು. ಇದಕ್ಕೆ ಎಲ್ಲಾ ಸದಸ್ಯರು ಸಮ್ಮತಿಸಿದರು.

**ನಿರ್ಣಯ:** ಚರ್ಚೆಯ ಸಂತರ ನಿರ್ಣಯ ಸಂಖ್ಯೆ: 2020-ಸಿ-6.04(ಇ) ರಲ್ಲಿ ಸಮಿತಿಯ ಅಧ್ಯಕ್ಷರು ಸೂಚಿಸಿದ ಬದಲಾವಣೆಯನ್ನು ಅನುಮತಿಸಿದ ನಂತರ ದಿನಾಂಕ:16-10-2020 ರಂದು ನಡೆದ ಸಿಂಡಿಕೇಟ್ ಸಾಮನ್ಯ ಸಭಾ ನಡಾವಳಿಯನ್ನು ಧೃಡೀಕರಿಸಲಾಯಿತು.

**2021-ಸಿಂ-1.03:** ದಿನಾಂಕ:08-10-2020 ಮತ್ತು 16-10-2020ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಗಳ ನಡಾವಳಿಗಳ ನಿರ್ಣಯಗಳ ಮೇಲೆ ಕೈಗೊಂಡ ಕ್ರಮಗಳ ವರದಿ.

**ಚರ್ಚೆ:** ಸದಸ್ಯರುಗಳು ಸಿಂಡಿಕೇಟ್ ಸಭೆಯು ಕೈಗೊಂಡ ಕೆಲವು ನಿರ್ಣಯಗಳನ್ನು ಅನುಷ್ಠಾನಗೊಳಿಸಿರುವುದಿಲ್ಲವೆಂದರು. ಇದಕ್ಕೆ ಉತ್ತರಿಸಿದ ಕುಲಸಚಿವರು ಸಿಂಡಿಕೇಟ್ ಕೈಗೊಂಡ ಎಲ್ಲಾ ನಿರ್ಣಯಗಳನ್ನು ಕಾರ್ಯಗತಗೊಳಿಸಲಾಗಿದೆ ಎಂದರು.



Scanned with CamScanner

ನಿರ್ಣಯ: ಚರ್ಚೆಯ ನಂತರ ದಿನಾಂಕ:08-10-2020 ಮತ್ತು 16-10-2020ರಂದು ನಡೆದ ಸಿಂಡಿಕೇಟ್ ಸಾಮಾನ್ಯ ಸಭೆಗಳ ನಡಾವಳಿಗಳ ನಿರ್ಣಯಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಅಂಗೀಕರಿಸಲಾಯಿತು.

**2021-ಸಿಂ-1.04:** ಸ್ನಾತಕೋತ್ತರ ಉರ್ದು ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

ನಿರ್ಣಯ: ಸ್ನಾತಕೋತ್ತರ ಉರ್ದು ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಪರಿಣಿತರ ಪಟ್ಟಿಯನ್ನು ಸಭೆಯು ಅನುಮೋದಿಸಿತು ಹಾಗೂ ಅಧ್ಯಯನ ಮಂಡಳಿಯನ್ನು, ಆದಷ್ಟು ಜ್ಯೇಷ್ಠತೆಯನ್ನು ಪರಿಗಣಿಸಿ ನಿಯಮಾನುಸಾರ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**2021-ಸಿಂ-1.05:** ಸ್ನಾತಕ ಉರ್ದು ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

ನಿರ್ಣಯ: ಸ್ನಾತಕ ಉರ್ದು ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಸಲುವಾಗಿ ಪರಿಣಿತರ ಪಟ್ಟಿಯನ್ನು ಸಭೆಯು ಅನುಮೋದಿಸಿತು ಹಾಗೂ ಅಧ್ಯಯನ ಮಂಡಳಿಯನ್ನು ಆದಷ್ಟು ಜ್ಯೇಷ್ಠತೆಯನ್ನು ಪರಿಗಣಿಸಿ ನಿಯಮನುಸಾರ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**2021-ಸಿಂ-1.06:** ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

ನಿರ್ಣಯ: ಸ್ನಾತಕೋತ್ತರ ಸಂಸ್ಕೃತ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಪರಿಣಿತರ ಪಟ್ಟಿಯನ್ನು ಸಭೆಯು ಅನುಮೋದಿಸಿತು ಹಾಗೂ ಅಧ್ಯಯನ ಮಂಡಳಿಯನ್ನು, ಆದಷ್ಟು ಜ್ಯೇಷ್ಠತೆಯನ್ನು ಪರಿಗಣಿಸಿ ನಿಯಮಾನುಸಾರ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**2021-ಸಿಂ-1.07:** ಸ್ನಾತಕ ಸಂಸ್ಕೃತ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

ನಿರ್ಣಯ: ಸ್ನಾತಕ ಸಂಸ್ಕೃತ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಪರಿಣಿತರ ಪಟ್ಟಿಯನ್ನು ಸಭೆಯು ಅನುಮೋದಿಸಿತು ಹಾಗೂ ಅಧ್ಯಯನ ಮಂಡಳಿಯನ್ನು, ಆದಷ್ಟು ಜ್ಯೇಷ್ಠತೆಯನ್ನು ಪರಿಗಣಿಸಿ ನಿಯಮಾನುಸಾರ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**2021-ಸಿಂ-1.08:** ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

ನಿರ್ಣಯ: ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಪರಿಣಿತರ ಪಟ್ಟಿಯನ್ನು ಸಭೆಯು ಅನುಮೋದಿಸಿತು ಹಾಗೂ ಅಧ್ಯಯನ ಮಂಡಳಿಯನ್ನು, ಆದಷ್ಟು ಜ್ಯೇಷ್ಠತೆಯನ್ನು ಪರಿಗಣಿಸಿ ನಿಯಮಾನುಸಾರ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**2021-ಸಿಂ-1.09:** ಸ್ನಾತಕ ಭೂವಿಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

ನಿರ್ಣಯ: ಸ್ನಾತಕ ಭೂವಿಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಪರಿಣಿತರ ಪಟ್ಟಿಯನ್ನು ಸಭೆಯು ಅನುಮೋದಿಸಿತು ಹಾಗೂ ಅಧ್ಯಯನ ಮಂಡಳಿಯನ್ನು, ಆದಷ್ಟು ಜ್ಯೇಷ್ಠತೆಯನ್ನು ಪರಿಗಣಿಸಿನಿಯಮಾನುಸಾರ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**2021-ಸಿಂ-1.10 :** ಸ್ನಾತಕ ಜೈವಿಕ ತಂತ್ರಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

ನಿರ್ಣಯ: ಸ್ನಾತಕ ಜೈವಿಕ ತಂತ್ರಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಪರಿಣಿತರ ಪಟ್ಟಿಯನ್ನು ಸಭೆಯು ಅನುಮೋದಿಸಿತು ಹಾಗೂ ಅಧ್ಯಯನ ಮಂಡಳಿಯನ್ನು, ಆದಷ್ಟು ಜ್ಯೇಷ್ಠತೆಯನ್ನು ಪರಿಗಣಿಸಿ ನಿಯಮಾನುಸಾರ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

**2021-ಸಿಂ-1.11:** ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ಮಂಡಳಿಯನ್ನು ಪರುನರಚಿಸುವ ಬಗ್ಗೆ.



Scanned with CamScanner

ನಿರ್ಣಯ: ಸ್ನಾತಕೋತ್ತರ ಪರಿಸರ ವಿಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಪರಿಣಿತರ ಪಟ್ಟಿಯನ್ನು ಸಭೆಯು ಅನುಮೋದಿಸಿತು ಹಾಗೂ ಅಧ್ಯಯನ ಮಂಡಳಿಯನ್ನು, ಆದಷ್ಟು ಜ್ಯೇಷ್ಠತೆಯನ್ನು ಪರಿಗಣಿಸಿ ನಿಯಮಾನುಸಾರ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರನೀಡಲಾಯಿತು.

2021–ಸಿಂ–1.12: ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮಂಡಳಿಯನ್ನು ಪರುನರಚಿಸುವ ಬಗ್ಗೆ.

ನಿರ್ಣಯ: ಸ್ನಾತಕೋತ್ತರ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಪರಿಣಿತರ ಪಟ್ಟಿಯನ್ನು ಸಭೆಯು ಅನುಮೋದಿಸಿತು ಹಾಗೂ ಅಧ್ಯಯನ ಮಂಡಳಿಯನ್ನು, ಆದಷ್ಟು ಜ್ಯೇಷ್ಠತೆಯನ್ನು ಪರಿಗಣಿಸಿ ನಿಯಮಾನುಸಾರ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರನೀಡಲಾಯಿತು.

2021–ಸಿಂ–1.13: ಸ್ನಾತಕ ಸಸ್ಯಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

ನಿರ್ಣಯ: ಸ್ನಾತಕ ಸಸ್ಯಶಾಸ್ತ್ರ ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಪರಿಣಿತರ ಪಟ್ಟಿಯನ್ನು ಸಭೆಯು ಅನುಮೋದಿಸಿತು ಹಾಗೂ ಅಧ್ಯಯನ ಮಂಡಳಿಯನ್ನು, ಆದಷ್ಟು ಜ್ಯೇಷ್ಠತೆಯನ್ನು ಪರಿಗಣಿಸಿ ನಿಯಮಾನುಸಾರ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

2021–ಸಿಂ–1.14: ಪ್ರಯಾಣ ಭತ್ಯೆ ಮತ್ತು ಉಪಸ್ಥಿತ ಭತ್ಯೆಯ ಪರಿಷ್ಕರಣೆಯನ್ನು ಸ್ಥಿರೀಕರಣಕ್ಕಾಗಿ ಮಂಡಿಸುವ ಕುರಿತು.

ನಿರ್ಣಯ: ಚರ್ಚೆಯ ನಂತರ ಪ್ರಯಾಣ ಭತ್ಯೆ ಮತ್ತು ಉಪಸ್ಥಿತಿ ಭತ್ಯೆಯನ್ನು 2020–21ನೇ ಸಾಲಿನ ಅಧ್ಯಯನ ಮಂಡಳಿಯ ಸಭೆಯು ಪ್ರಾರಂಭವಾದ ದಿನದಿಂದ ಪೂರ್ವಾನ್ವಯವಾಗುವಂತೆ ನೀಡಲು ನಿರ್ಣಯಿಸಿ ಪರಿಷ್ಕರಣೆಯನ್ನು ಸ್ಥಿರೀಕರಿಸಲಾಯಿತು.

2021–ಸಿಂ–1.15: 2019–20ನೇ ಆರ್ಥಿಕ ಸಾಲಿನ 32ನೇ ವಾರ್ಷಿಕ ವರದಿಯನ್ನು ಅನುಮೋದಿಸುವ ಕುರಿತು.

ನಿರ್ಣಯ: ಚರ್ಚೆಯ ನಂತರ 2019–20–ನೇ ಆರ್ಥಿಕ ಸಾಲಿನ 32ನೇ ವಾರ್ಷಿಕ ವರದಿಯನ್ನು ಅನುಮೋದಿಸಲಾಯಿತು.

2021–ಸಿಂ–1.16: ಸ್ನಾತಕೋತ್ತರ ಭೂಗರ್ಭಶಾಸ್ತ್ರ ಸಂಯುಕ್ತ ಇ.ಎಸ್.ಆರ್.ಎಂ & ಎಂ.ಆರ್.ಎಸ್.ಪಿ. (Geo-Informatics) ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

ನಿರ್ಣಯ: ಸ್ನಾತಕೋತ್ತರ ಭೂಗರ್ಭಶಾಸ್ತ್ರ ಸಂಯುಕ್ತ ಇ.ಎಸ್.ಆರ್.ಎಂ & ಎಂ.ಆರ್.ಎಸ್.ಎ. (Geo-Informatics) ಅಧ್ಯಯನ ಮಂಡಳಿಯನ್ನು ಪುನರ್ ರಚಿಸುವ ಸಲುವಾಗಿ ಪರಿಣಿತರ ಪಟ್ಟಿಯನ್ನು ಸಭೆಯು ಅನುಮೋದಿಸಿತು ಹಾಗೂ ಅಧ್ಯಯನ ಮಂಡಳಿಯನ್ನು, ಆದಷ್ಟು ಜ್ಯೇಷ್ಠತೆಯನ್ನು ಪರಿಗಣಿಸಿ ನಿಯಮಾನುಸಾರ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

2021–ಸಿಂ–1.17: 31ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಮುಖ್ಯ ಅತಿಥಿಗಳ ಹೆಸರುಗಳನ್ನು ಶಿಫಾರಸ್ಸು ಮಾಡುವ ಬಗ್ಗೆ.

ನಿರ್ಣಯ: ವಿಶ್ವವಿದ್ಯಾಲಯದ 31ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಮುಖ್ಯ ಅತಿಥಿಗಳ ಹೆಸರುಗಳನ್ನು ಶಿಫಾರಸ್ಸು ಮಾಡಿದ ಸಭೆಯು ಮುಂದಿನ ಕ್ರಮಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಯಿತು.

2021–ಸಿಂ–1.18: "Statutes relating to direct recruitment and career advancement scheme and miscellaneous provisions to implement the revised UGC pay scales to Teachers, Librarians, Physical Education and Equivalent cadre personnel of kuvempu university." ಪರಿನಿಯಮದ ಅನುಮೋದನೆ ಕುರಿತು.



Scanned with CamScanner

ಚರ್ಚೆ: ವಿಷಯವನ್ನು ಮಂಡಿಸಿ ಮಾತನಾಡಿದ ಕುಲಸಚಿವರು ವಿಶ್ವವಿದ್ಯಾಲಯದ ಅಧ್ಯಾಪಕರುಗಳಿಗೆ 7ನೇ ಯು.ಜಿ.ಸಿ ಪರಿಷ್ಕೃತ ವೇತನ ಶ್ರೇಣಿಯನ್ನು ವಿಸ್ತರಿಸಿ ನೀಡಿರುವುದಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಆದೇಶವನ್ನು ಯಥಾವತ್ತಾಗಿ ಪರಿನಿಯಮದ ರೂಪದಲ್ಲಿ ಸಿದ್ಧಪಡಿಸಿ ಮಂಡಿಸಲಾಗಿದೆ ಎಂದರು. ಹಾಗೂ ಈ ಹಿಂದೆ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಸಲ್ಲಿಸಲಾಗಿ ಸರ್ಕಾರದಿಂದ ಕೆಲವೊಂದು ತಿದ್ದುಪಡಿಗಳನ್ನು ಸೂಚಿಸಿದ್ದು, ಸದರಿ ತಿದ್ದುಪಡಿಯನ್ನು ಪರಿನಿಯಮದ ಸ್ಥಾಯಿ ಸಮಿತಿಯು ಪರಿಶೀಲಿಸಿ ಪರಿಷ್ಕೃತ ಪರಿನಿಯಮವನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದರು. ಅಲ್ಲದೇ ಪರಿನಿಯಮವನ್ನು ಸಲ್ಲಿಸದಿದ್ದಲ್ಲಿ ಅಧ್ಯಾಪಕರ ವೇತನಾನುದಾನವನ್ನು ಸ್ಥಗಿತಗೊಳಿಸಲಾಗುವುದು ಎಂದು ಸರ್ಕಾರದಿಂದ ಪತ್ರ ಬಂದಿರುವುದಾಗಿಯೂ ಸಭೆಯ ಗಮನಕ್ಕೆ ತಂದರು.

ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರುಗಳು ಪರಿನಿಯಮಗಳನ್ನು ಮೊದಲು ವಿದ್ಯಾ ವಿಷಯಕ ಪರಿಷತ್ ಸಭೆಗೆ ಮಂಡಿಸಿ ಅನುಮೋದನೆ ಪಡೆದು ನಂತರ ಸಿಂಡಿಕೇಟ್ ಸಭೆಗೆ ಮಂಡಿಸುವುದು ಸೂಕ್ತವೆಂದರು. ಇದಕ್ಕೆ ಉತ್ತರಿಸಿದ ಕುಲಸಚಿವರು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ದ ಪ್ರಕರಣ 41(2) ರಲ್ಲಿ ಸಿಂಡಿಕೇಟ್ ತಾನಾಗಿಯೇ ಆಗಲಿ ಅಥವಾ ವಿದ್ಯಾ ವಿಷಯಕ ಪರಿಷತ್ ಮಾಡಿದ ಪ್ರಸ್ತಾವನೆಯ ಮೇಲಾಗಲೀ, ಪರಿನಿಯಮದ ಕರಡನ್ನು ಪರಿಗಣನೆಗೆ ತೆಗೆದುಕೊಳ್ಳಬಹುದು ಎಂದು ತಿಳಿಸಿರುವುದನ್ನು ಅವಗಾಹನೆಗೆ ತಂದರು. ಹಾಗೂ ಸದರಿ ಪರಿನಿಯಮವನ್ನು ಅತ್ಯಂತ ತುರ್ತು ಇದ್ದುದರಿಂದ ಸಿಂಡಿಕೇಟ್ ಸಭೆಗೆ ಮಂಡಿಸಲಾಗಿದೆ ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ಪರಿನಿಯಮವನ್ನು ಅನುಮೋದಿಸಲಾಯಿತು.

**2021–ಸಿಂ–1.19:** Statute Governing to the Establishment of a Centre for Women studies in Kuvempu University ಪರಿನಿಯಮದ ಅನುಮೋದನೆ ಕುರಿತು.

**ನಿರ್ಣಯ:** ಚರ್ಚೆಯ ನಂತರ ಪರಿನಿಯಮವನ್ನು ಅನುಮೋದಿಸಲಾಯಿತು.

**2021–ಸಿಂ–1.20:** Statute relating to the establishment of Prasaranga and institution of Director, Deputy Director, Superintendent and ministerial posts in Prasaranga of Kuvempu University Jnana Sahyadri Shankaraghatta -2021 ಪರಿನಿಯಮದ ಅನುಮೋದನೆ ಕುರಿತು.

**ನಿರ್ಣಯ:** **ಚರ್ಚೆಯ ನಂತರ ಪರಿನಿಯಮವನ್ನು ಅನುಮೋದಿಸಲಾಯಿತು.**

**2021–ಸಿಂ–1.21:** Statutes relating to the upgradation of posts of Pump Operator person to the incumbent as Senior Pump Operator in the maintenance section of Engineering division of Kuvempu University-2021 ಪರಿನಿಯಮದ ಅನುಮೋದನೆ ಕುರಿತು.

**ನಿರ್ಣಯ:** ಚರ್ಚೆಯ ನಂತರ ಪರಿನಿಯಮವನ್ನು ಅನುಮೋದಿಸಲಾಯಿತು.

**2021–ಸಿಂ–1.22:** Statutes relating to creation of Medical, Para medical and ministerial posts in the Kuvempu University Health centre, Jnana Sahyadri Shankaraghatta-2021 ಪರಿನಿಯಮದ ಅನುಮೋದನೆ ಕುರಿತು.

**ನಿರ್ಣಯ:** ಚರ್ಚೆಯ ನಂತರ ಪರಿನಿಯಮವನ್ನು ಅನುಮೋದಿಸಲಾಯಿತು.

**2021–ಸಿಂ–1.23:** Statutes relating to the upgradation posts of Draftsman as Senior Draftsman in Engineering division of Kuvempu University by promotion – 2021 ಪರಿನಿಯಮದ ಅನುಮೋದನೆ ಕುರಿತು.



Scanned with CamScanner

ನಿರ್ಣಯ: ಚರ್ಚೆಯ ನಂತರ ಪರಿನಿಯಮವನ್ನು ಅನುಮೋದಿಸಲಾಯಿತು.

2021–ಸಿಂ–1.24 Kuvempu University Regulations governing to the Degree of Doctor of Philosophy (Ph. D), 2017 ವಿನಿಯಮದ ಅನುಮೋದನೆ ಕುರಿತು.

ನಿರ್ಣಯ: ಚರ್ಚೆಯ ನಂತರ ವಿನಿಯಮವನ್ನು ಅನುಮೋದಿಸಲಾಯಿತು.

2021ಸಿಂ1.24(ಎ): "Statutes Governing to the Affiliation of Colleges/ Institutions under the jurisdiction of Kuvempu University 2019 (Framed under Section 59 read with Sections 40(g) and 41 of the Karnataka State Universities Act 2000)" ಪರಿನಿಯಮದ ಅನುಮೋದನೆ ಕುರಿತು..

ನಿರ್ಣಯ: ಚರ್ಚೆಯ ನಂತರ ಪರಿನಿಯಮವನ್ನು ಅನುಮೋದಿಸಲಾಯಿತು.

## ಮಾನವ ಸಂಪನ್ಮೂಲ ಮತ್ತು ನಿರ್ವಹಣೆ ವಿಭಾಗ

2021–ಸಿಂ–1.25: ಖಾಯಂ ಪೂರ್ವ ಸೇವಾವಧಿಯನ್ನು ಘೋಷಣೆ ಮಾಡುವ ಕುರಿತು.

ಚರ್ಚೆ: ವಿಷಯವನ್ನು ಪ್ರಸ್ತಾಪಿಸಿದ ಕುಲಸಚಿವರು ಈ ಹಿಂದಿನ ಸಭೆಯಲ್ಲಿ ಕೆಲವು ಷರತ್ತುಗಳನ್ನು ವಿಧಿಸಿ ಖಾಯಂ ಪೂರ್ವ ಸೇವಾವಧಿಯನ್ನು ಘೋಷಿಸಲು ನಿರ್ಣಯಿಸಲಾಗಿತ್ತು. ಆದರೆ ಈ ಕುರಿತು ಪರಿಶೀಲಿಸಲಾಗಿ ನೇಮಕಾತಿಗಳಲ್ಲಿ ಕೆಲವೊಂದು ಲೋಪದೋಷಗಳಿರುವುದನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ತರಲಾಗಿದೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ ರವರು ನೇಮಕಾತಿಯಲ್ಲಿ ತಪ್ಪಾಗಿದ್ದರೆ ಖಾಯಂ ಪೂರ್ವ ಸೇವಾವಧಿಯ ಘೋಷಣೆಯ ನಂತರವೂ ಸಹ ನಿಯಮಾನುಸಾರ ಕ್ರಮಕೈಗೊಳ್ಳಲು ಅವಕಾಶವಿರುವುದರಿಂದ ಇವರುಗಳ ಖಾಯಂ ಪೂರ್ವ ಸೇವಾವಧಿಯನ್ನು ಘೋಷಿಸುವಂತೆ ಸಭೆಯನ್ನು ಕೋರಿದರು. ಇದಕ್ಕೆ ಕುಲಸಚಿವ(ಮೌಲ್ಯಮಾಪನ) ಇವರು ಸಹಮತ ವ್ಯಕ್ತಪಡಿಸಿದರು. ಹಾಗೂ ನೇಮಕಾತಿ ಪ್ರಕ್ರಿಯೆಗಳಲ್ಲಿ ತಪ್ಪಾಗಿದ್ದರೆ ಅದಕ್ಕೆ ಅಭ್ಯರ್ಥಿಗಳು ಹೊಣೆಯಾಗುವುದಿಲ್ಲವೆಂದು ತಿಳಿಸುತ್ತಾ ಎಲ್ಲಾ ಸದಸ್ಯರುಗಳು ಖಾಯಂಪೂರ್ವ ಸೇವಾವಧಿಯನ್ನು ಘೋಷಿಸಲು ಒತ್ತಾಯಿಸಿದರು.

ನಿರ್ಣಯ: ಸುದೀರ್ಘ ಚರ್ಚೆಯ ನಂತರ ಪ್ರಸ್ತಾವನೆಯಲ್ಲಿರುವ ಎಲ್ಲಾ ಸಿಬ್ಬಂದಿಗಳ ಖಾಯಂ ಪೂರ್ವ ಸೇವಾವಧಿಯನ್ನು ವಿಶ್ವವಿದ್ಯಾಲಯದ ಪ್ರೊಬೇಷನ್ ಪರಿನಿಯಮ 1983ರ 5(1)(ಎ) ಪ್ರಕಾರ ಘೋಷಿಸಲು ನಿರ್ಣಯಿಸಲಾಯಿತು.

2021–ಸಿಂ–1.26: ಖಾಯಂ ಪೂರ್ವ ಸೇವಾವಧಿಯನ್ನು ಘೋಷಣೆ ಮಾಡುವ ಕುರಿತು.

ನಿರ್ಣಯ: ಚರ್ಚೆಯ ನಂತರ ಡಾ. ಮುದುಕಪ್ಪ, ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ. ಇವರ ಖಾಯಂ ಪೂರ್ವ ಸೇವಾವಧಿಯನ್ನು ವಿಶ್ವವಿದ್ಯಾಲಯದ ಪ್ರೊಬೇಷನ್ ಪರಿನಿಯಮ 1983ರ 5(1)(ಎ) ಪ್ರಕಾರ ಘೋಷಿಸಲು ನಿರ್ಣಯಿಸಲಾಯಿತು.

2021–ಸಿಂ–1.27: ಶ್ರೀಮತಿ ಗೀತಾಗೋರೆ, ಹಿರಿಯ ಸಹಾಯಕರು – ಇವರನ್ನು ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಸೇವೆಯಿಂದ ನಿವೃತ್ತಿಗೊಳಿಸಿರುವ ಬಗ್ಗೆ.

ನಿರ್ಣಯ: ಶ್ರೀಮತಿ ಗೀತಾಗೋರೆ, ಹಿರಿಯ ಸಹಾಯಕರು ಇವರನ್ನು ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿಗೊಳಿಸಿ ಬಿಡುಗಡೆಗೊಳಿಸಲಾದ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

2021–ಸಿಂ–1.28: ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರನ್ನು ನೇಮಿಸಿರುವುದನ್ನು ಸ್ಥಿರೀಕರಿಸುವ ಕುರಿತು.

ನಿರ್ಣಯ: ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ವಿಭಾಗಾಧ್ಯಕ್ಷರುಗಳನ್ನು ನೇಮಕ ಮಾಡಿರುವ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.



Scanned with CamScanner

**2021–ಸಿಂ–1.29:** ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ ಇಲ್ಲಿಗೆ ಪ್ರಾಚಾರ್ಯರನ್ನು ನೇಮಕ ಮಾಡುವ ಬಗ್ಗೆ.

**ಚರ್ಚೆ:** ವಿಷಯವನ್ನು ಮಂಡಿಸಿ ಮಾತನಾಡಿದ ಕುಲಸಚಿವರು ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಪ್ರಾಚಾರ್ಯರಾಗಿದ್ದ ಡಾ. ಶಶಿರೇಖಾ ಕೆ.ಆರ್. ಇವರು 31ನೇ ಡಿಸೆಂಬರ್–2020 ರಂದು ವಯೋ ನಿವೃತ್ತಿ ಹೊಂದಿದ್ದು, ಇವರಿಂದ ತೆರವಾಗುವ ಸ್ಥಾನಕ್ಕೆ ಮೂರೂ ಕಾಲೇಜುಗಳ ಜ್ಯೇಷ್ಠತಾ ಪಟ್ಟಿಯಲ್ಲಿನ ಜ್ಯೇಷ್ಠತೆಯನ್ನು ಪರಿಗಣಿಸಿ ನೇಮಕ ಮಾಡಲಾಗುತ್ತಿದೆ. ಆದರೆ ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜಿನ ಪ್ರಾಚಾರ್ಯರು ವಿಜ್ಞಾನ ವಿಷಯದ ಅಧ್ಯಾಪಕರಾಗಿದ್ದು, ಜ್ಯೇಷ್ಠತೆಯಲ್ಲಿಯೂ ಸಹ ಮೊದಲಿಗರಾಗಿರುವುದರಿಂದ ಸದರಿಯವರನ್ನು ಸಹ್ಯಾದ್ರಿ ವಿಜ್ಞಾನ ಕಾಲೇಜಿಗೆ ಪರಿಗಣಿಸಿ ನಂತರದ ಜ್ಯೇಷ್ಠತೆಯಲ್ಲಿರುವವರನ್ನು ಸಹ್ಯಾದ್ರಿ ವಾಣಿಜ್ಯ ಮತ್ತು ನಿರ್ವಹಣೆ ಕಾಲೇಜಿಗೆ ಪರಿಗಣಿಸಿ ಮಾನ್ಯ ಕುಲಪತಿಗಳ ಅನುಮೋದನೆಯೊಂದಿಗೆ ಆದೇಶ ಹೊರಡಿಸಿರುವುದನ್ನು ಸಭೆಯ ಗಮನಕ್ಕೆ ತಂದು, ಇದಕ್ಕೆ ಅನುಮೋದನೆ ಹಾಗೂ ಸ್ಥಿರೀಕರಣ ನೀಡಲು ಸಭೆಯನ್ನು ಕೋರಿದರು. ಜ್ಯೇಷ್ಠತಾ ಪಟ್ಟಿಯಲ್ಲಿ ಕೆಲವು ಅಧ್ಯಾಪಕರ ಜ್ಯೇಷ್ಠತೆಯು ತಪ್ಪಾಗಿದ್ದು ಅದನ್ನು ಸರಿಪಡಿಸುವಂತೆ ಕೆಲವು ಸದಸ್ಯರು ಕೋರಿದರು.

**ನಿರ್ಣಯ:** ಚರ್ಚೆಯ ನಂತರ ಸಹ್ಯಾದ್ರಿ ವಿಜ್ಞಾನ ಮತ್ತು ವಾಣಿಜ್ಯ ಕಾಲೇಜುಗಳಿಗೆ ಪ್ರಾಚಾರ್ಯರುಗಳನ್ನು ನೇಮಕ ಮಾಡಿರುವ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು. ಹಾಗೂ ಕಾಲೇಜಿನ ಅಧ್ಯಾಪಕರ ಜ್ಯೇಷ್ಠತಾ ಪಟ್ಟಿಯನ್ನು ಮತ್ತೊಮ್ಮೆ ಪರಿಶೀಲಿಸಿ ಸರಿಪಡಿಸುವಂತೆಯೂ ನಿರ್ಣಯಿಸಲಾಯಿತು.

**2021–ಸಿಂ–1.30:** ಶ್ರೀ ಹರೀಶ್ ಕುಮಾರ್ ಎಲ್, ಪ್ರಥಮ ದರ್ಜೆ ಸಹಾಯಕರು, ಸಹ್ಯಾದ್ರಿ ಕಲಾ ಕಾಲೇಜು – ಇವರಿಗೆ ವೈದ್ಯಕೀಯ ವೆಚ್ಚವನ್ನು ಪಾವತಿಸುವ ಕುರಿತು.

**ನಿರ್ಣಯ:** ಶ್ರೀ ಹರೀಶ್ ಕುಮಾರ್ ಎಲ್, ಪ್ರಥಮ ದರ್ಜೆ ಸಹಾಯಕರು, ಸಹ್ಯಾದ್ರಿ ಕಲಾ ಕಾಲೇಜು – ಇವರಿಗೆ ನಿಯಮಾನುಸಾರ ವೈದ್ಯಕೀಯ ವೆಚ್ಚವನ್ನು ಪಾವತಿಸಲು ನಿರ್ಣಯಿಸಲಾಯಿತು.

**2021–ಸಿಂ–1.31:** ಶ್ರೀ ಬಸವರಾಜ ಕೆ, ಪ್ರಥಮ ದರ್ಜೆ ಸಹಾಯಕರು – ಇವರ ವೈದ್ಯಕೀಯ ಚಿಕಿತ್ಸಾ ವೆಚ್ಚದ ಬಾಬ್ತು ಪಾವತಿಸುವ ಕುರಿತು.

**ನಿರ್ಣಯ:** ಶ್ರೀ ಬಸವರಾಜ ಕೆ, ಪ್ರಥಮ ದರ್ಜೆ ಸಹಾಯಕರು – ಇವರಿಗೆ ನಿಯಮಾನುಸಾರ ವೈದ್ಯಕೀಯ ಚಿಕಿತ್ಸಾ ವೆಚ್ಚದ ಬಾಬ್ತು ಪಾವತಿಸಲು ನಿರ್ಣಯಿಸಲಾಯಿತು.

**2021–ಸಿಂ–1.32:** ಶ್ರೀ ಗೋಪಾಲ್ ಆರ್, ಪ್ರಥಮ ದರ್ಜೆ ಸಹಾಯಕರು – ಇವರ ವೈದ್ಯಕೀಯ ಚಿಕಿತ್ಸಾ ವೆಚ್ಚದ ಬಾಬ್ತು ಪಾವತಿಸುವ ಕುರಿತು.

**ನಿರ್ಣಯ:** ಶ್ರೀ ಗೋಪಾಲ್ ಆರ್, ಪ್ರಥಮ ದರ್ಜೆ ಸಹಾಯಕರು– ಇವರಿಗೆ ನಿಯಮಾನುಸಾರ ವೈದ್ಯಕೀಯ ಚಿಕಿತ್ಸಾ ವೆಚ್ಚದ ಬಾಬ್ತು ಪಾವತಿಸಲು ನಿರ್ಣಯಿಸಲಾಯಿತು.

**2021–ಸಿಂ–1.33:** ಕೆಳದಿ ವಸ್ತು ಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾ ಕೇಂದ್ರದಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತರಾದ ನೌಕರರಿಗೆ ನಿವೃತ್ತಿ ಸೌಲಭ್ಯಗಳನ್ನು ಮಂಜೂರು ಮಾಡುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಆದೇಶದ ಮೇರೆಗೆ ಕೆಳದಿ ವಸ್ತು ಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾ ಕೇಂದ್ರದಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾದ ನೌಕರರಿಗೆ ಹಾಗೂ ಇನ್ನು ಮುಂದೆ ನಿವೃತ್ತರಾಗಲಿರುವ ನೌಕರರುಗಳಿಗೆ ನಿವೃತ್ತಿ ಸೌಲಭ್ಯಗಳನ್ನು ವಿಶ್ವವಿದ್ಯಾಲಯದಿಂದ ಮಂಜೂರು ಮಾಡಲು ನಿರ್ಣಯಿಸಲಾಯಿತು.

**2021–ಸಿಂ–1.34:** ವಿವಿಧ ಶಾಲೆಗಳ ನಿರ್ದೇಶಕರುಗಳನ್ನು ನೇಮಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಪ್ರಸ್ತಾವನೆಯಲ್ಲಿರುವಂತೆ ಶಾಲಾ ನಿರ್ದೇಶಕರುಗಳನ್ನು ನೇಮಕ ಮಾಡಲು ನಿರ್ಣಯಿಸಲಾಯಿತು.



Scanned with CamScanner

**2021-ಸಿಂ-1.35:** ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ್, ಇವರಿಗೆ ದಿನಾಂಕ:11-04-2009 ರಿಂದ ಅನ್ವಯವಾಗುವಂತೆ ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ವೃತ್ತಿ ಪದೋನ್ನತಿ ನೀಡಿರುವ ಕುರಿತು.

**ಚರ್ಚೆ:** ವಿಷಯದ ಕುರಿತು ಮಾತನಾಡಿದ ಕುಲಸಚಿವರು, ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ್ ಇವರ ವೃತ್ತಿ ಪದೋನ್ನತಿ ಕುರಿತು ದಿನಾಂಕ:31-12-2020ರ ಸರ್ಕಾರದ ಕಾರಣ ಕೇಳುವ ನೋಟೀಸ್ ನಲ್ಲಿ ಸದರಿಯವರಿಗೆ ಪ್ರಾಧ್ಯಾಪಕ ಹುದ್ದೆಗೆ ನೇರ ನೇಮಕಾತಿ ಹೊಂದಿದ ನಂತರ ಹಿಂದಿನ ದಿನಾಂಕದಿಂದ ವೃತ್ತಿಪದೋನ್ನತಿಗೆ ಪರಿಗಣಿಸಿರುವ ವಿಶ್ವವಿದ್ಯಾಲಯದ ಕ್ರಮವನ್ನು ಆಕ್ಷೇಪಿಸಿ ಇದು ಸರ್ಕಾರದ ನೀತಿ ನಿಯಮಗಳಿಗೆ ವಿರುದ್ದವಾಗಿರುವುದರಿಂದ ವೃತ್ತಿ ಪದೋನ್ನತಿಯ ಆಯ್ಕೆ ಸಮಿತಿ ನಡಾವಳಿಯನ್ನು ಅನುಮೋದಿಸಿ ಕೈಗೊಂಡಿರುವ ಸಿಂಡಿಕೇಟ್ ಸಭೆಯ ನಿರ್ಣಯವನ್ನು ಏಕೆ ರದ್ದುಗೊಳಿಸಬಾರದೆಂದು 7 ದಿನಗಳೊಳಗಾಗಿ ಲಿಖಿತ ಸಮಜಾಯಿಷಿಯನ್ನು ನೀಡುವಂತೆ ತಪ್ಪಿದಲ್ಲಿ ತಮ್ಮ ಹೇಳಿಕೆ ಏನೂ ಇಲ್ಲವೆಂದು ಪರಿಭಾವಿಸಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ.

ಸರ್ಕಾರದ ನೋಟೀಸಿಗೆ ಉತ್ತರಿಸುವ ಸಂಬಂಧ ಪ್ರಕರಣದ ವಿಷಯವನ್ನು ಸಿಂಡಿಕೇಟ್ ಸಭೆಗೆ ಮಂಡಿಸಲಾಗಿದ್ದು ಸಿಂಡಿಕೇಟ್ ಸಭೆಯ ನಂತರ ನಿರ್ಣಯವನ್ನು ತಿಳಿಸಲಾಗುವುದು ಎಂದು ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಸಭೆಗೆ ತಿಳಿಸಿದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ ರವರು ಮಾತನಾಡುತ್ತಾ, ಸದರಿಯವರ ವೃತ್ತಿ ಪದೋನ್ನತಿಗೆ ಪೂರಕವಾಗುವಂತೆ ಯು.ಜಿ.ಸಿ ನಿಯಮಾವಳಿಗಳೇನಾದರೂ ಇದ್ದಲ್ಲಿ ಪರಿಗಣಿಸಬಹುದು ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ್, ಇವರ ವೃತ್ತಿ ಪದೋನ್ನತಿಯ ಆಯ್ಕೆ ಸಮಿತಿ ನಡಾವಳಿಯನ್ನು ಸರ್ಕಾರಕ್ಕೆ ಕಳುಹಿಸಿಕೊಡಲು ನಿರ್ಣಯಿಸಲಾಯಿತು.

**2021-ಸಿಂ-1.36:** ಡಾ. ಕೆ. ಎಂ. ಮಹದೇವನ್, ಪ್ರಾಧ್ಯಾಪಕರು, ಇವರ ಅಂತರ್ ವಿಶ್ವವಿದ್ಯಾಲಯ ವರ್ಗಾವಣೆ ಕುರಿತು.

**ನಿರ್ಣಯ:** ಚರ್ಚೆಯ ನಂತರ ಡಾ.ಕೆ.ಎಂ.ಮಹದೇವನ್, ಇವರಿಗೆ ಮೈಸೂರು ವಿಶ್ವವಿದ್ಯಾಲಯಕ್ಕೆ ಹುದ್ದೆ ರಹಿತ **ವರ್ಗಾವಣೆ** ಹೊಂದಲು ಆಕ್ಷೇಪಣಾ ರಹಿತ ಪ್ರಮಾಣ ಪತ್ರ ನೀಡಲು ನಿರ್ಣಯಿಸಲಾಯಿತು.

**2021-ಸಿಂ-1.37:** ಕೋವಿಡ್-19 ಚಿಕಿತ್ಸೆಯ ವೈದ್ಯಕೀಯ ವೆಚ್ಚಗಳನ್ನು ಪಾವತಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಪ್ರಸ್ತಾವನೆಯಲ್ಲಿರುವ ಒಟ್ಟು 05 ಜನ ಅಧ್ಯಾಪಕ ಮತ್ತು ಅಧ್ಯಾಪಕೇತರ ಸಿಬ್ಬಂದಿಗಳ ವೈದ್ಯಕೀಯ ವೆಚ್ಚಗಳನ್ನು ಪಾವತಿಗೆ ಪರಿಗಣಿಸಲು ನಿರ್ಣಯಿಸಲಾಯಿತು.

**2021-ಸಿಂ-1.39:** ಶ್ರೀ ರಮೇಶ್, ಕಿರಿಯ ಸಹಾಯಕರು – ಇವರನ್ನು ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಸೇವೆಯಿಂದ ನಿವೃತ್ತಿಗೊಳಿಸಿರುವ ಬಗ್ಗೆ.

**ನಿರ್ಣಯ:** ಶ್ರೀ ರಮೇಶ್, ಕಿರಿಯ ಸಹಾಯಕರು – ಇವರನ್ನು ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಸೇವೆಯಿಂದ ನಿವೃತ್ತಿಗೊಳಿಸಿ ಬಿಡುಗಡೆಗೊಳಿಸಿರುವ ಕ್ರಮವನ್ನು ಸಭೆಯು ಅನುಮೋದಿಸಿ ಸ್ಥಿರೀಕರಿಸಿತು.

**2021-ಸಿಂ-1.40:** ಕುವೆಂಪು ವಿಶ್ವವಿದ್ಯಾಲಯದ ಅಧ್ಯಾಪಕರುಗಳನ್ನು ಆಡಳಿತಾತ್ಮಕ ಹುದ್ದೆಗಳಿಗೆ ನಿಯೋಜಿಸುವುದಕ್ಕೆ ಗೌರವ ಸಂಭಾವನೆ ಪಾವತಿಸುವ ಕುರಿತು ರಚಿಸಿರುವ ಕರಡು ಪರಿನಿಯಮವನ್ನು ಸರ್ಕಾರವು ತಿರಸ್ಕರಿಸಿರುವ ಕುರಿತು.

**ಚರ್ಚೆ:** ಪ್ರಸ್ತಾವನೆಯನ್ನು ಮಂಡಿಸಿ ಮಾತನಾಡಿದ ಕುಲಸಚಿವರು, ಸದರಿ ವಿಷಯದ ಕುರಿತು ಈ ಹಿಂದೆ ಕೈಗೊಂಡ ಸಿಂಡಿಕೇಟ್ ಸಭೆಯ ನಿರ್ಣಯ ಹಾಗೂ ಕರಡು ಪರಿನಿಯಮವನ್ನು ಸರ್ಕಾರವು ತಿರಸ್ಕರಿಸಿರುವ ಅಂಶವನ್ನು ಸಭೆಯ ಗಮನಕ್ಕೆ ತಂದರು.

**ನಿರ್ಣಯ:** ಚರ್ಚೆಯ ನಂತರ ಸಭೆಯು ಸರ್ಕಾರದ ಪತ್ರವನ್ನು ಗಮನಿಸಿ ಅದರಂತೆ ಕ್ರಮಕೈಗೊಳ್ಳಲು ನಿರ್ಣಯಿಸಿತು.



Scanned with CamScanner

2021ಸಿಂ1.40(ಎ): ಕುವೆಂಪು ವಿಶ್ವವಿದ್ಯಾಲಯದ ಹಂಗಾಮಿ ನೌಕರರ ಸಕ್ರಮಾತಿಯನ್ನು ರದ್ದುಗೊಳಿಸಿ ಹೊರಡಿಸಿರುವ ಸರ್ಕಾರಿ ಆದೇಶಗಳನ್ನು ಹಿಂಪಡೆಯುವ ಬಗ್ಗೆ.

**ನಿರ್ಣಯ:** ಸದರಿ ವಿಷಯದ ಕುರಿತು ಚರ್ಚಿಸಲು ಕಾಲಾವಕಾಶದ ಅಗತ್ಯವಿರುವುದರಿಂದ ವಿಷಯವನ್ನು ಮುಂದೂಡುವಂತೆ ಸದಸ್ಯರು ಕೋರಿದ್ದರಿಂದ ವಿಷಯವನ್ನು ಮುಂದೂಡಲಾಯಿತು.

2021–ಸಿಂ1.40(ಬಿ): ಘಟಕ ಕಾಲೇಜುಗಳ ಅರೆಕಾಲಿಕ ಉಪನ್ಯಾಸಕರುಗಳು ಸೇವೆ ಸಲ್ಲಿಸಿ ಸೇವಾ ಸಕ್ರಮಾತಿಗೊಂಡಿರುವ ಉಪನ್ಯಾಸಕರುಗಳಿಗೆ ಸೇವಾ ಸಕ್ರಮಾತಿಗೊಂಡ ದಿನಾಂಕದಿಂದ ಕಾಲ್ಪನಿಕವಾಗಿ ಯು.ಜಿ.ಸಿ ವೇತನ ಶ್ರೇಣಿಯನ್ನು ವಿಸ್ತರಿಸಿ ಸ್ಥಾನೀಕರಣ ನೀಡಿರುವ ಬಗ್ಗೆ.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ಸರ್ಕಾರವು ಕೋರಿರುವ ಮಾಹಿತಿ / ದಾಖಲೆಗಳನ್ನು ಸಲ್ಲಿಸುವಂತೆ ಹಾಗೂ ಸದರಿ ಅಧ್ಯಾಪಕರುಗಳ ಯು.ಜಿ.ಸಿ ವೇತನ ಶ್ರೇಣಿ ವಿಸ್ತರಣೆ ಕುರಿತು, ಈ ಹಿಂದೆ ಸಿಂಡಿಕೇಟ್ ಸಭೆಯು ಕೈಗೊಂಡ ನಿರ್ಣಯದಂತೆ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

2021–ಸಿಂ1.40(ಸಿ): ಅಧ್ಯಾಪಕ ಹಾಗೂ ಅಧ್ಯಾಪಕೇತರ ಅಧಿಕಾರಿ / ನೌಕರರುಗಳಿಗೆ 2021–22 ನೇ ಸಾಲಿನಲ್ಲಿ ವಯೋ ನಿವೃತ್ತಿ ಹೊಂದಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** 2021–22 ನೇ ಸಾಲಿನಲ್ಲಿ ಅಧ್ಯಾಪಕ ಹಾಗೂ ಅಧ್ಯಾಪಕೇತರ ಅಧಿಕಾರಿ / ನೌಕರರುಗಳಿಗೆ ನಿಯಮಾನುಸಾರ ವಯೋ ನಿವೃತ್ತಿ ಹೊಂದಲು ಅನುಮತಿ ನೀಡಲು ನಿರ್ಣಯಿಸಲಾಯಿತು.

## ದೈಹಿಕ ಶಿಕ್ಷಣ ವಿಭಾಗ

2021–ಸಿಂ–1.41 : ಕ್ರೀಡಾ ಚಟುವಟಿಕೆ ಮತ್ತು ತರಬೇತಿ ಶಿಬಿರ/ಪಂದ್ಯಾವಳಿ ಆಯ್ಕೆ ಪ್ರಕ್ರಿಯೆಗಳಿಗೆ ಭಾಗವಹಿಸುವ ಅಧಿಕಾರಿಗಳಿಗೆ ದಿನಭತ್ಯೆಯನ್ನು ಪರಿಷ್ಕರಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಕ್ರೀಡಾ ವಿಭಾಗಕ್ಕೆ ಸಂಬಂಧಿಸಿದ ಕಾರ್ಯಗಳಲ್ಲಿ ಭಾಗವಹಿಸುವ ಅಧಿಕಾರಿಗಳ ದಿನಭತ್ಯೆಯನ್ನು ರೂ.850ಕ್ಕೆ ಪರಿಷ್ಕರಿಸಲು ನಿರ್ಣಯಿಸಲಾಯಿತು.

2021–ಸಿಂ–1.42 : 2017–18ನೇ ಸಾಲಿನಲ್ಲಿ ನಡೆದ ಅಂತರ ವಿಶ್ವವಿದ್ಯಾಲಯ ಪಂದ್ಯಾವಳಿಯ ಹೆಚ್ಚುವರಿ ವೆಚ್ಚದ ಬಿಲ್ಲನ್ನು 2020–21ನೇ ಸಾಲಿನಲ್ಲಿ ಪಾವತಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ 2017–18ನೇ ಸಾಲಿನ ಅಂತರ ವಿಶ್ವವಿದ್ಯಾಲಯ ಪಂದ್ಯಾವಳಿಯ ಹೆಚ್ಚುವರಿ ವೆಚ್ಚದ ಬಿಲ್ಲನ್ನು 2020–21ನೇ ಸಾಲಿಗೆ ವಿಳಂಬ ಮನ್ನಾ ಮಾಡಿ ಪಾವತಿಸಲು ಅನುಮೋದನೆ ನೀಡಲಾಯಿತು.

## ಹಣಕಾಸು ವಿಭಾಗ

2021–ಸಿಂ–1.43 : 2020–21ನೇ ಆರ್ಥಿಕ ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದನೆ ಕುರಿತು.

**ಚರ್ಚೆ:** 2020–21ನೇ ಸಾಲಿನ ಹಣಕಾಸು ಸಮಿತಿ ಸಭೆಯ ನಡಾವಳಿಯ ಕುರಿತು ಹಣಕಾಸು ಅಧಿಕಾರಿಗಳು ಸಭೆಗೆ ಹಾಜರಾಗಿ ಸಂಕ್ಷಿಪ್ತವಾಗಿ ವಿವರಿಸಿದರು. ಮುಂದುವರೆದು ಮಾತನಾಡಿದ ಹಣಕಾಸು ಅಧಿಕಾರಿಗಳು ಪ್ರಸ್ತುತ ಆರ್ಥಿಕ ವರ್ಷದಲ್ಲಿ ದೂರಶಿಕ್ಷಣ ನಿರ್ದೇಶನಾಲಯದ ಪ್ರವೇಶಾತಿಯು ಮೊಟಕುಗೊಂಡಿರುವುದರಿಂದ ಹಾಗೂ ಸರ್ಕಾರವು ವೇತನ ಮತ್ತು ಭತ್ಯೆಗಳ ಹೊರತು ಬೇರೆ ಯಾವುದೇ ಅನುದಾನ ಮಂಜೂರು ಮಾಡುತ್ತಿಲ್ಲವಾದ್ದರಿಂದ ಆಂತರಿಕ ಸಂಪನ್ಮೂಲದ ಕೊರತೆ ಉಂಟಾಗಿದೆ ಎಂದರು. ಇದಕ್ಕೆ ಎಲ್ಲಾ ಸದಸ್ಯರುಗಳು ಆರ್ಥಿಕ ಸಂಪನ್ಮೂಲದ ಕ್ರೋಢೀಕರಣಕ್ಕೆ ಹೆಚ್ಚು ಒತ್ತು ನೀಡುವಂತೆ ಸಲಹೆ ನೀಡಿದರು.



Scanned with CamScanner

ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ ರವರು ವಿಷಯ ಸಂಖ್ಯೆ 6.1 ರಲ್ಲಿನ ಸಂಯೋಜನಾ ಶುಲ್ಕಕ್ಕೆ ಜಿ.ಎಸ್.ಟಿ ಪಾವತಿಸಿರುವುದರ ಕುರಿತು ಪ್ರಸ್ತಾಪಿಸಿ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಿಂದ ಈ ಶುಲ್ಕಗಳನ್ನು ಹಿಂಪಾವತಿಸುವ ಬಗ್ಗೆ ಕ್ರಮವಹಿಸುವುದು ಸೂಕ್ತವೆಂದರು. ಹಾಗೂ ಆಂತರಿಕ ಸಂಪನ್ಮೂಲದ ಕೊರತೆ ಹಿನ್ನೆಲೆಯಲ್ಲಿ ವಿಷಯ ಸಂಖ್ಯೆ: 6.2, 6.3, 6.4 ಮತ್ತು 6.5ನ್ನು ಮುಂದೂಡುವಂತೆ ಸಭೆಯನ್ನು ಕೋರಿದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ದಿನಾಂಕ:05-10-2020 ರಂದು ನಡೆದ 2020-21ನೇ ಆರ್ಥಿಕ ಸಾಲಿನ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಯಲ್ಲಿನ ವಿಷಯ ಸಂಖ್ಯೆ: 6.2, 6.3, 6.4 ಮತ್ತು 6.5ನ್ನು ಹೊರತುಪಡಿಸಿ ಉಳಿದ ವಿಷಯಗಳನ್ನು ಅನುಮೋದಿಸಲಾಯಿತು.

## ದಾಸ್ತಾನು ಮತ್ತು ಖರೀದಿ ವಿಭಾಗ

**2021-ಸಿಂ-1.44 :** ದಿನಾಂಕ:27-10-2020 ರಂದು ನಡೆದ ಖರೀದಿ ಸಮಿತಿ ಸಭೆ ನಡಾವಳಿ ಅನುಮೋದನೆ ಬಗ್ಗೆ.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:27-10-2020 ರಂದು ನಡೆದ ಖರೀದಿ ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸಲಾಯಿತು.

**2021-ಸಿಂ-1.45:** ಅತಿಥಿಗೃಹದ ವಾಸ್ತವ್ಯಕ್ಕೆ ಕೊಠಡಿ ಬಾಡಿಗೆ ನಿಗಧಿ ಪಡಿಸುವ ಕುರಿತು.

**ಚರ್ಚೆ:** ಚರ್ಚೆಯಲ್ಲಿ ಭಾಗವಹಿಸಿದ ಎಲ್ಲಾ ಸದಸ್ಯರುಗಳು ಪ್ರಾಧಿಕಾರಗಳ ಸದಸ್ಯರುಗಳು ವಿಶ್ವವಿದ್ಯಾಲಯಕ್ಕೆ ಕಾರ್ಯನಿಮಿತ್ತ ಹಾಜರಾದ ಸಂದರ್ಭದಲ್ಲಿ ಅವರುಗಳಿಗೆ ಕೊಠಡಿ ಬಾಡಿಗೆ ಪಡೆಯುವುದು ಸೂಕ್ತವಾಗಲಾರದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

**ನಿರ್ಣಯ:** ಚರ್ಚೆಯ ನಂತರ ಅತಿಥಿ ಗೃಹದ ವಾಸ್ತವ್ಯಕ್ಕೆ ಈ ಕೆಳಗಿನಂತೆ ನಿಗದಿಪಡಿಸಿರುವ ಶುಲ್ಕಗಳನ್ನು ಪ್ರಾಧಿಕಾರಗಳ ಸದಸ್ಯರುಗಳನ್ನು ಹೊರತು ಪಡಿಸಿ ಇತರೆಯವರಿಗೆ ಅನ್ವಯಿಸಿ ಕೊಠಡಿ ಬಾಡಿಗೆಯನ್ನು ಪಡೆಯಲು ನಿರ್ಣಯಿಸಿ ಬಾಡಿಗೆ ದರವನ್ನು ಅನುಮೋದಿಸಲಾಯಿತು.

| ಕೊಠಡಿ ವಿವರ ಒಬ್ಬರಿಗೆ ಒಂದು ದಿನಕ್ಕೆ | ವಿಶ್ವವಿದ್ಯಾಲಯದ ಕಾರ್ಯ ನಿಮಿತ್ತ ಆಗಮಿಸುವಅತಿಥಿಗಳು / ಅಧ್ಯಾಪಕರುಗಳು (ಮೌಲ್ಯಮಾಪನ / ಕಾರ್ಯಗಾರ / ವಿಶೇಷ ಉಪನ್ಯಾಸ /ಪಿಹೆಚ್.ಡಿ. ಮೌಖಿಕ ಪರೀಕ್ಷೆ) | | ವಿಶ್ವವಿದ್ಯಾಲಯದ ಇತರೆ ಕಾರ್ಯಗಳ ನಿಮಿತ್ತ ಆಗಮಿಸುವ ಅತಿಥಿಗಳಿಗೆ | |
|---|---|---|---|---|
| | ಕೊಠಡಿ ಬಾಡಿಗೆ | ಸೇವಾಶುಲ್ಕ | ಕೊಠಡಿ ಬಾಡಿಗೆ | ಸೇವಾಶುಲ್ಕ |
| ಸಾಮಾನ್ಯ ಕೊಠಡಿ | 200-00 | 50-00 | 300-00 | 50-00 |
| ವಿ.ಐ.ಪಿ. ಕೊಠಡಿ | 300-00 | 50-00 | 400-00 | 50-00 |
| ವಿ.ವಿ.ಐ.ಪಿ ಕೊಠಡಿ | 500-00 | 50-00 | 700-00 | 50-00 |

**2021-ಸಿಂ-1.46:** ಹೊಸ ವಾಹನ ಖರೀದಿಸುವ ಕುರಿತು.

**ಚರ್ಚೆ:** ವಿಷಯವನ್ನು ಮಂಡಿಸಿ ಮಾತನಾಡಿದ ಕುಲಸಚಿವರು, ಈ ಹಿಂದೆ ಸರ್ಕಾರಕ್ಕೆ ಹೊಸ ವಾಹನ ಖರೀದಿಗೆ ಪ್ರಸ್ತಾವನೆ ಸಲ್ಲಿಸಿದ ಸಂದರ್ಭದಲ್ಲಿ ಸರ್ಕಾರವು ಹಳೆಯ ವಾಹನವನ್ನು ವಿಲೇವಾರಿ ಮಾಡಿದ ನಂತರ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಲಾಗಿತ್ತು. ಅದರಂತೆ ವಿಶ್ವವಿದ್ಯಾಲಯದಲ್ಲಿನ ಹಳೆಯ ವಾಹನಗಳನ್ನು ಈಗಾಗಲೇ ನಿಯಮಾನುಸಾರ ಹರಾಜು ಮೂಲಕ ವಿಲೇವಾರಿ ಮಾಡಿದ್ದು, ಹೊಸ ವಾಹನದ ಅಗತ್ಯವಿರುವುದರಿಂದ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ ಹೊಸ ವಾಹನ ಖರೀದಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದನೆ ನೀಡಲಾಯಿತು.



Scanned with CamScanner

**2021–ಸಿಂ–1.47:** ದಿನಾಂಕ:06–01–2021 ರಂದು ವಿಶ್ವವಿದ್ಯಾಲಯದ ವಾಹನಗಳ ಹರಾಜಿನ ಸಂಬಂಧ ನಡೆದ ಟೆಂಡರ್ / ಬಹಿರಂಗ ಹರಾಜು ಪ್ರಕ್ರಿಯೆಯ ನಡಾವಳಿ ಅನುಮೋದನೆ ಬಗ್ಗೆ.

**ಚರ್ಚೆ:** ವಿಷಯವನ್ನು ಮಂಡಿಸಿ ಮಾತನಾಡಿದ ಕುಲಸಚಿವರು, ವಿಶ್ವವಿದ್ಯಾಲಯದಲ್ಲಿನ ಹಳೆಯ ವಾಹನವನ್ನು ವಿಲೇವಾರಿ ಮಾಡಲು ನಿಯಮಾನುಸಾರ ಟೆಂಡರ್ ಕರೆದು ನಿಯಮಾನುಸಾರ ಒಟ್ಟು 05 ವಾಹನಗಳನ್ನು ಹರಾಜು ಮಾಡಲಾಗಿದೆ. ಸದರಿ ಪ್ರಕ್ರಿಯೆಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸಲಾಗಿದೆ ಎಂದರು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯದ ಹಳೆಯ ವಾಹನಗಳ ಟೆಂಡರ್ / ಬಹಿರಂಗ ಹರಾಜಿನ ಪ್ರಕ್ರಿಯೆ ನಡಾವಳಿಯನ್ನು ಸಭೆಯು ಅನುಮೋದಿಸಿತು.

**2021–ಸಿಂ–1.48:** ವಿಶ್ವವಿದ್ಯಾಲಯದ ವಿವಿಧ ವಿಭಾಗ/ಕಛೇರಿಗಳ ಪತ್ರಗಳನ್ನು ಕೊರಿಯರ್ ಮೂಲಕ ರವಾನಿಸುವ ಸಂಬಂಧದ ಇ–ಟೆಂಡರ್ ಅಂಗೀಕರಿಸಿ ದರ ಒಪ್ಪಂದ ಮಾಡಿಕೊಳ್ಳುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಕೊರಿಯರ್ ಸೇವೆಯ ಇ–ಟೆಂಡರ್ ಅನ್ನು ಅಂಗೀಕರಿಸಿ ನಿಯಮಾನುಸಾರ ದರ ಒಪ್ಪಂದ ಮಾಡಿಕೊಳ್ಳಲು ಅನುಮೋದಿಸಲಾಯಿತು.

**2021–ಸಿಂ–1.49 :** ವಿಶ್ವವಿದ್ಯಾಲಯಕ್ಕೆ ವಿವಿಧ ಮಾದರಿಯ ಪೀಠೋಪಕರಣಗಳನ್ನು ಸರಬರಾಜು ಮಾಡುವ ಸಂಬಂಧದ ಇ–ಟೆಂಡರ್ ಅನುಮೋದಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಪೀಠೋಪಕರಣ ಸರಬರಾಜು ಮಾಡುವ ಇ–ಟೆಂಡರ್ ಅನ್ನು ಅಂಗೀಕರಿಸಿ ನಿಯಮಾನುಸಾರ ದರ ಒಪ್ಪಂದ ಮಾಡಿಕೊಳ್ಳಲು ಅನುಮೋದಿಸಲಾಯಿತು.

**2021–ಸಿಂ–1.49(ಎ):** ವಿಶ್ವವಿದ್ಯಾಲಯ ಅಧಿಕಾರಿಗಳಿಗೆ ಗೃಹಕಛೇರಿಗಳಾಗಿ ಮಾರ್ಪಡಿಸಲ್ಪಟ್ಟ ವಸತಿಗೃಹಗಳನ್ನು ಬಾಡಿಗೆ / ನೀರಿನ ಕರ / ವಿದ್ಯುತ್ ಶುಲ್ಕ ಪಾವತಿ ರಹಿತವಾಗಿ ಹಂಚಿಕೆ ಮಾಡುವ ಬಗ್ಗೆ.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯ ಕುಲಸಚಿವರು, ಕುಲಸಚಿವರು (ಪರೀಕ್ಷಾಂಗ) ಇವರು ವಿಶ್ವವಿದ್ಯಾಲಯ ವಸತಿಗೃಹವನ್ನು ಪಡೆದ ದಿನಾಂಕದಿಂದ ಅನ್ವಯವಾಗುವಂತೆ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

## ಅಭಿವೃದ್ಧಿ ವಿಭಾಗ

**2021–ಸಿಂ–1.50 :** ಕರ್ನಾಟಕ ಚಲನಚಿತ್ರ ಅಕಾಡೆಮಿ, ಬೆಂಗಳೂರು ಈ ಸಂಸ್ಥೆಯೊಂದಿಗೆ ಒಡಂಬಡಿಕೆ (MoU) ಮಾಡಿಕೊಳ್ಳುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ವಿಶ್ವವಿದ್ಯಾಲಯಕ್ಕೆ ಯಾವುದೇ ಆರ್ಥಿಕ ಹೊರೆಯಾಗದಂತೆ ಒಡಂಬಡಿಕೆ ಮಾಡಿಕೊಳ್ಳಲು ಸಭೆಯು ಅನುಮೋದಿಸಿತು.

**2021–ಸಿಂ–1.51 :** ಪ್ರೊ. ವೈ. ಅರ್ತೋಬ ನಾಯಕ, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ – ಇವರ ಪೇಟೆಂಟ್ ನವೀಕರಿಸುವ/ಮುಂದುವರೆಸುವ ಆದೇಶವನ್ನು ಸ್ಥಿರೀಕರಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಪ್ರೊ. ವೈ. ಅರ್ತೋಬನಾಯಕ್ ಇವರ ಪೇಟೆಂಟ್ ನವೀಕರಿಸುವ /ಮುಂದುವರೆಸುವ ಶುಲ್ಕವನ್ನು ಪಾವತಿಸಿರುವ ಕ್ರಮವನ್ನು ಸ್ಥಿರೀಕರಿಸಲಾಯಿತು.

**2021–ಸಿಂ–1.52 :** ಅಧ್ಯಯನ ಪೀಠದ ಪದನಾಮವನ್ನು ಬದಲಾಯಿಸುವ ಬಗ್ಗೆ.

**ನಿರ್ಣಯ:** **ಶ್ರೀಮದ್ ರಂಭಾಪುರಿ ರೇಣುಕಾಚಾರ್ಯ ಅಧ್ಯಯನ ಪೀಠ** ಎಂಬುದನ್ನು **ಶ್ರೀ ಜಗದ್ಗುರು ರೇಣುಕಾಚಾರ್ಯ ಅಧ್ಯಯನ ಪೀಠವೆಂದು** ಬದಲಾವಣೆಯನ್ನು ಮಾಡಲು ಅನುಮೋದಿಸಲಾಯಿತು.



Scanned with CamScanner

2021-ಸಿಂ-1.53 : ಸಂಪನ್ಮೂಲ ವ್ಯಕ್ತಿಗಳಿಗೆ ಗೌರವ ಸಂಭಾವನೆಯನ್ನು ಹೆಚ್ಚಿಸುವ ಕುರಿತು.

**ನಿರ್ಣಯ:** ಆನ್-ಲೈನ್ ನಲ್ಲಿ ಆಯೋಜಿಸಲಾಗುವ ಸಮ್ಮೇಳನ / ಕಾರ್ಯಗಾರ /ವಿಶೇಷ ಸಂಕಿರಣ /ಕಮ್ಮಟಗಳಲ್ಲಿ ಭಾಗವಹಿಸುವ ಸಂಪನ್ಮೂಲ ವ್ಯಕ್ತಿಗಳ ಗೌರವ ಸಂಭಾವನೆಯನ್ನು ಹೊರದೇಶದ ಸಂಪನ್ಮೂಲ ವ್ಯಕ್ತಿಗಳಿಗೆ ರೂ.3000-00 ಹಾಗೂ ದೇಶದೊಳಗಿನ ಸಂಪನ್ಮೂಲ ವ್ಯಕ್ತಿಗಳಿಗೆ ರೂ.2000-00 ರಂತೆ ಪಾವತಿಸಲು ನಿರ್ಣಯಿಸಲಾಯಿತು.

## ಎಸ್ಟೇಟ್ ವಿಭಾಗ

2021-ಸಿಂ-1.54: ಕೋವಿಡ್-19ರ ಹಿನ್ನೆಲೆಯಲ್ಲಿ Pest Control Management Solution & Sanitisation/Disinfectant ಸೇವೆಗಾಗಿ ಅಲ್ಪಾವಧಿಯ ಇ-ಟೆಂಡರ್ ಕರೆದಿರುವ ಕುರಿತು.

**ಚರ್ಚೆ:** ವಿಷಯವನ್ನು ಕುಲಸಚಿವರು ಸಭೆಗೆ ಮಂಡಿಸಿ, ಕೋವಿಡ್-19ರ ಹಿನ್ನೆಲೆಯಲ್ಲಿ ಜ್ಞಾನ ಸಹ್ಯಾದ್ರಿ ಆವರಣ, ನಗರ ಕಛೇರಿ, ಘಟಕ ಕಾಲೇಜುಗಳು ಶಿವಮೊಗ್ಗ ಮತ್ತು ಕಡೂರು ಸ್ನಾತ್ತಕೋತ್ತರ ಕೇಂದ್ರ ಈ ಎಲ್ಲಾ ಆವರಣಗಳಲ್ಲಿರುವ ಕಟ್ಟಡಗಳು, ರಸ್ತೆಗಳು, ಕಾಂಪೌಂಡ್ ಇತ್ಯಾದಿ ಪ್ರದೇಶಗಳಿಗೆ Pest Control Management Solution & Sanitisation/Disinfectant ಮಾಡಿಸಲು ನಿಯಮಾನುಸಾರ ಇ-ಟೆಂಡರ್ ಕರೆದು ಅರ್ಹ ಬಿಡ್‌ದಾರ ಸಂಸ್ಥೆಯು ಸೂಚಿಸಿದ ದರಗಳಿಗೆ 30ಪೈಸೆಗಳ ರಿಯಾಯಿತಿ ದರದಲ್ಲಿ ಸಮಿತಿಯು ಪರಿಷ್ಕೃತ ದರಗಳನ್ನು ಅಂಗೀಕರಿಸಿರುತ್ತದೆ.

ಇ-ಟೆಂಡರ್‌ನಲ್ಲಿ ವಿಧಿಸಲಾದ ಷರತ್ತಿನಂತೆ M/s Victory Pest Control & services Bangalore – ಇವರಿಂದ ಸರಬರಾಜು/ಕಾರ್ಯ ಕುರಿತು ಕರಾರು ಒಪ್ಪಂದ ಪತ್ರ ಹಾಗೂ ಭದ್ರತಾ ಠೇವಣಿಯನ್ನು ಪಡೆದುಕೊಂಡು ಪೆಸ್ಟ್ ಕಂಟ್ರೋಲ್ ಮತ್ತು ಸ್ಯಾನಿಟೈಸೇಶನ್ ಕಾರ್ಯಕ್ಕಾಗಿ ಸದರಿ ಸಂಸ್ಥೆಗೆ ಆದೇಶ ನೀಡಲಾಗಿರುವುದನ್ನು ತಿಳಿಸುತ್ತಾ, ಈ ಕುರಿತು ಅನುಮೋದನೆ ಕೋರಿದರು.

**ನಿರ್ಣಯ:** ಚರ್ಚೆಯ ನಂತರ ಮಾಹೆಯಾನ ರೂ.14ಲಕ್ಷಗಳ ಮಿತಿಗೊಳಪಟ್ಟು Pest Control Management Solution & Sanitisation/Disinfectant ಮಾಡಿಸಲು ಅನುಮೋದಿಸಲಾಯಿತು.

## ಇಂಜಿನಿಯರಿಂಗ್ ವಿಭಾಗ

2021-ಸಿಂ-1.55 : ಕೆಳದಿ ವಸ್ತು ಸಂಗ್ರಹಾಲಯದ ಮೇಲ್ಛಾವಣಿ ದುರಸ್ತಿ ಮತ್ತು ವಿದ್ಯುತ್ ಪೂರೈಕೆ ವ್ಯವಸ್ಥೆಯ ಕಾಮಗಾರಿ ಬಗ್ಗೆ.

**ನಿರ್ಣಯ:** ಚರ್ಚೆಯ ನಂತರ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

2021-ಸಿಂ-1.55(ಎ): ದಿನಾಂಕ:21-11-2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದನೆಗಾಗಿ ಮಂಡಿಸುತ್ತಿರುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ದಿನಾಂಕ:21-11-2020 ರಂದು ನಡೆದ ಕಟ್ಟಡ ಸಮಿತಿ ಸಭೆಯ ನಡಾವಳಿಯನ್ನು ಅನುಮೋದಿಸಲಾಯಿತು.



Scanned with CamScanner

## ಶೈಕ್ಷಣಿಕ ವಿಭಾಗ

**2021–ಸಿಂ–1.55(ಬಿ):** "ಪ್ರೊ. ಎಂ. ಕೃಷ್ಣಪ್ಪ ಕಮಂಡಲಗೊಂದಿ, ಸ್ನಾತಕೋತ್ತರ ಅನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ" ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ:** ಚರ್ಚೆಯ ನಂತರ "ಪ್ರೊ. ಎಂ. ಕೃಷ್ಣಪ್ಪ ಕಮಂಡಲಗೊಂದಿ, ಸ್ನಾತಕೋತ್ತರ ಅನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ" ಇವರ ಹೆಸರಿನಲ್ಲಿ 2020–21 ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ವಿಜ್ಞಾನ ನಿಕಾಯದ ಸ್ನಾತಕೋತ್ತರ ಅನ್ವಯಿಕ ಸಸ್ಯಶಾಸ್ತ್ರ ಅಧ್ಯಯನ ವಿಷಯದಲ್ಲಿ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿಗೆ/ವಿದ್ಯಾರ್ಥಿನಿಗೆ ದತ್ತಿನಿಧಿ ಸ್ವರ್ಣಪದಕವನ್ನು" ಸ್ಥಾಪಿಸಲು ಅನುಮೋದಿಸಲಾಯಿತು.

**2021–ಸಿಂ–1.55(ಸಿ) :** "ದಿವಂಗತ ಹುಣಸಘಟ್ಟ ಮಲ್ಲಿಕಾರ್ಜುನಪ್ಪ, – ಎಕ್ಸ್. ಎಂ. ಎಲ್. ಎ., ತರೀಕೆರೆ" ಇವರ ಹೆಸರಿನಲ್ಲಿ ದತ್ತಿನಿಧಿ ಸ್ವರ್ಣಪದಕ ಸ್ಥಾಪನೆ ಬಗ್ಗೆ.

**ನಿರ್ಣಯ:** ಚರ್ಚೆಯ ನಂತರ "ದಿವಂಗತ ಹುಣಸಘಟ್ಟ ಮಲ್ಲಿಕಾರ್ಜುನಪ್ಪ, – ಎಕ್ಸ್. ಎಂ. ಎಲ್. ಎ., ತರೀಕೆರೆ" ಇವರ ಹೆಸರಿನಲ್ಲಿ 2020–21 ನೇ ಶೈಕ್ಷಣಿಕ ಸಾಲಿನಿಂದ ಕುವೆಂಪು ವಿಶ್ವವಿದ್ಯಾಲಯದ ವಾಣಿಜ್ಯ ನಿಕಾಯದ ಎಂ.ಬಿ.ಎ (ಟಿ.ಟಿ.ಎಂ) ಅಧ್ಯಯನ ವಿಷಯದಲ್ಲಿ ಪ್ರಥಮ ರ್‍ಯಾಂಕ್ ಪಡೆದ ವಿದ್ಯಾರ್ಥಿಗೆ/ವಿದ್ಯಾರ್ಥಿನಿಗೆ ದತ್ತಿನಿಧಿ ಸ್ವರ್ಣಪದಕವನ್ನು" ಸ್ಥಾಪಿಸಲು ಅನುಮೋದಿಸಲಾಯಿತು.

**2021–ಸಿಂ–1.55(ಸಿ–1):** 2018–19ನೇ ಸಾಲಿನಲ್ಲಿ ಪ್ರಾರಂಭಿಸಲಾದ Diploma Construction and Industrial Safety ಪದವಿಯ ಪಠ್ಯಕ್ರಮ ಮತ್ತು ವಿನಿಯಮವನ್ನು ಅನುಮೋದಿಸುವ ಕುರಿತು.

**ನಿರ್ಣಯ:** ಚರ್ಚೆಯ ನಂತರ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**2021–ಸಿಂ–1.55(ಸಿ–2):** 2020–21ನೇ ಶೈಕ್ಷಣಿಕ ವರ್ಷದಿಂದ ಕುವೆಂಪು ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಸಹ್ಯಾದ್ರಿ ವಿಜ್ಞಾನ ಕಾಲೇಜಿನಲ್ಲಿ ಹೊಸದಾಗಿ ಸ್ನಾತಕೋತ್ತರ ಭಾತಶಾಸ್ತ್ರ ಪದವಿ ಪ್ರಾರಂಭಿಸಿರುವ ಬಗ್ಗೆ ಸ್ಥಿರೀಕರಣಕ್ಕಾಗಿ.

**ಚರ್ಚೆ:** ವಿಷಯ ಪ್ರಸ್ತಾಪಿಸಿ ಮಾತನಾಡಿದ ಕುಲಸಚಿವರು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ವಿಶ್ವವಿದ್ಯಾಲಯದ ಘಟಕ ಕಾಲೇಜಾದ ಸಹ್ಯಾದ್ರಿ ವಿಜ್ಞಾನ ಕಾಲೇಜಿನಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ವಿಭಾಗವನ್ನು ಪ್ರಾರಂಭಿಸಲು ಡೀನರನ್ನೊಳಗೊಂಡ ಸಮಿತಿಯು ಶಿಫಾರಸ್ಸು ಮಾಡಿದ್ದು, ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಪ್ರಾರಂಭಿಸಿರುವುದಕ್ಕೆ ಸಭೆಯ ಅನುಮೋದನೆಗೆ ಮಂಡಿಸಿರುವುದಾಗಿ ವಿವರಿಸಿದರು.

**ನಿರ್ಣಯ:** ಚರ್ಚೆಯ ನಂತರ 2020–21ನೇ ಶೈಕ್ಷಣಿಕ ವರ್ಷದಿಂದ ಸಹ್ಯಾದ್ರಿ ವಿಜ್ಞಾನ ಕಾಲೇಜಿನಲ್ಲಿ ಸ್ನಾತಕೋತ್ತರ ಭೌತಶಾಸ್ತ್ರ ಪದವಿ ಕೋರ್ಸನ್ನು ಪ್ರಾರಂಭಿಸಿರುವುದನ್ನು ಅನುಮೋದಿಸಲಾಯಿತು.

## ಪರೀಕ್ಷಾ ವಿಭಾಗ

**2021–ಸಿಂ1.55(ಡಿ):** ಸ್ನಾತಕೋತ್ತರ ಅಧ್ಯಾಪಕರುಗಳಿಗೆ ಸ್ಥಳೀಯ ಭತ್ಯೆ ಮತ್ತು ಅಧ್ಯಯನ ಮಂಡಳಿಗಳ ಸಭೆಗಳಲ್ಲಿ ಭಾಗವಹಿಸುವ ಆಂತರಿಕ ಸದಸ್ಯರುಗಳಿಗೆ ಉಪಸ್ಥಿತಿ ಭತ್ಯೆ/ಪ್ರಯಾಣ ಪ್ರತಿ ಕಿ.ಮೀ. ದರಗಳನ್ನು ಪರಿಷ್ಕರಿಸುವ ಬಗ್ಗೆ.

**ನಿರ್ಣಯ:** ಚರ್ಚೆಯ ನಂತರ ಸ್ನಾತಕೋತ್ತರ ಅಧ್ಯಾಪಕರುಗಳಿಗೆ ಸ್ಥಳೀಯ ಭತ್ಯೆ ಮತ್ತು ಅಧ್ಯಯನ ಮಂಡಳಿಗಳ ಸಭೆಗಳಲ್ಲಿ ಭಾಗವಹಿಸುವ ಆಂತರಿಕ ಸದಸ್ಯರುಗಳಿಗೆ ಉಪಸ್ಥಿತಿ ಭತ್ಯೆ/ಪ್ರಯಾಣ ಭತ್ಯೆಗಳನ್ನು ಪರಿಷ್ಕರಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.



Scanned with CamScanner

**2021–ಸಿಂ–1.56 : ಸದಸ್ಯರುಗಳು ಮಂಡಿಸಿರುವ ಪ್ರಸ್ತಾವನೆಗಳು:**

1. **ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ ರವರು ಕಳುಹಿಸಿದ ಪ್ರಸ್ತಾವನೆ:**

**ನಿರ್ಣಯ:** ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ ಇವರು ಮಂಡಿಸಿದ ಪ್ರಸ್ತಾವನೆಗಳಿಗೆ ಈಗಾಗಲೇ ವಿಶ್ವವಿದ್ಯಾಲಯದ ಪತ್ರ ಸಂಖ್ಯೆ ಕುವಿ:ಯುಎಟಿ–1:12:448:2020–21 ದಿನಾಂಕ:08–01–2021 ರಲ್ಲಿ ಪೂರ್ಣ ಮಾಹಿತಿಯನ್ನು ನೀಡಿರುವುದನ್ನು ಒಪ್ಪಲಾಯಿತು.

2. **ಶ್ರೀ ಹೆಚ್.ಬಿ. ರಮೇಶ ಬಾಬು ರವರು ಕಳುಹಿಸಿದ ಪ್ರಸ್ತಾವನೆ:**

**ನಿರ್ಣಯ:** ಶ್ರೀ ಹೆಚ್.ಬಿ. ರಮೇಶ್ ಬಾಬು ರವರು ಸಿಂಡಿಕೇಟ್ ಸಭೆಯ ಚರ್ಚೆಗೆಂದು ಕಳುಹಿಸಲಾದ ಪ್ರಸ್ತಾವನೆಗೆ ಸಂಬಂಧಿಸಿದಂತೆ ಈಗಾಗಲೇ ವಿಶ್ವವಿದ್ಯಾಲಯದ ಪತ್ರ ಸಂಖ್ಯೆ ಕುವಿ:ಯುಎಟಿ–1:12:449:2020–21 ದಿನಾಂಕ:08/12–01–2021 ರಲ್ಲಿ ಪೂರ್ಣ ಮಾಹಿತಿಯನ್ನು ನೀಡಿರುವುದನ್ನು ಒಪ್ಪಲಾಯಿತು.

3. **ಶ್ರೀ ಕರುಣಾಕರ ಬಿ ರವರು ಕಳುಹಿಸಿದ ಪ್ರಸ್ತಾವನೆ:**

**ನಿರ್ಣಯ:** ಶ್ರೀ ಕರುಣಾಕರ ಬಿ. ಇವರು ಸಿಂಡಿಕೇಟ್ ಸಭೆಯ ಚರ್ಚೆಗೆಂದು ಕಳುಹಿಸಲಾದ ಪ್ರಸ್ತಾವನೆಗೆ ಸಂಬಂಧಿಸಿದಂತೆ ಈಗಾಗಲೇ ವಿಶ್ವವಿದ್ಯಾಲಯದ ಪತ್ರ ಸಂಖ್ಯೆ ಕುವಿ:ಯುಎಟಿ–1:12:447:2020–21 ದಿನಾಂಕ:08/12–01–2021 ರಲ್ಲಿ ಪೂರ್ಣ ಮಾಹಿತಿಯನ್ನು ನೀಡಿರುವುದನ್ನು ಒಪ್ಪಲಾಯಿತು.

**2021–ಸಿಂ–1.57 : ಸರ್ಕಾರದಿಂದ ಬಂದ ಪತ್ರಗಳು/ ರಹಸ್ಯ ವರದಿಗಳ ಮಂಡನೆ.**

**ಚರ್ಚೆ:** ಕುಲಸಚಿವರು ಸರ್ಕಾರದಿಂದ ಬಂದ ಪತ್ರ ಸಂಖ್ಯೆ ಇಡಿ 68 ಯುಎಸ್‌ವಿ2020 ದಿನಾಂಕ:09–12–2020ನ್ನು ಸಭೆಯ ಗಮನಕ್ಕೆ ತರುತ್ತಾ, ಇದರಲ್ಲಿ ಲಕ್ಕವಳ್ಳಿ ವನ್ಯ ಜೀವಿ ವಲಯದ ವ್ಯಾಪ್ತಿಯ ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಅಕ್ರಮ ಮರಗಳ ಕಡಿತಲೆಯಲ್ಲಿ ಭಾಗಿಯಾಗಿರುವರೆಂದು ಹೇಳಲಾದ ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧ ನ್ಯಾಯಾಲಯದಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಲು ಇವರುಗಳ ನೇಮಕಾತಿ ಪ್ರಾಧಿಕಾರವಾಗಿರುವ ಸಿಂಡಿಕೇಟ್ ಸಭೆಯು ಶಿಸ್ತು ಕ್ರಮಕೈಗೊಳ್ಳಲು ಆರೋಪಗಳ ಬಗ್ಗೆ ಪರಿಶೀಲಿಸಿ ದೋಷಾರೋಪಣಾ ಪಟ್ಟಿ ಸಲ್ಲಿಸಲು ಅನುಮತಿ ನೀಡುವ ಅಥವಾ ನೀಡದಿರುವ ಅರ್ಹತೆಯನ್ನು ಪರಿಗಣಿಸಲು ವಿಶ್ವವಿದ್ಯಾಲಯದ ಹಂತದಲ್ಲಿ ಅಂತಿಮ ನಿರ್ಣಯ ತೆಗೆದುಕೊಳ್ಳಬೇಕಾಗಿರುತ್ತದೆ.

ಆದ್ದರಿಂದ, ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ಪ್ರಸ್ತಾವನೆಯ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ಕ್ರಮಕೈಗೊಂಡು ನಿರ್ಧಾರವನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಇಲಾಖೆ – ಇವರಿಗೆ ನೇರವಾಗಿ ತಿಳಿಸಿ ಅದರ ಮಾಹಿತಿಯನ್ನು ಸರ್ಕಾರಕ್ಕೆ ನೀಡುವಂತೆ ನಿರ್ದೇಶಿಸಲಾಗಿದೆ.

ಸದರಿ ಸರ್ಕಾರದ ಪತ್ರದಲ್ಲಿ ಶ್ರೀ ಎನ್.ಜೆ. ಪಾಲಾಕ್ಷನಾಯ್ಕ್, ಎಸ್ಟೇಟ್ ಅಧಿಕಾರಿ, ಶ್ರೀ ಹೆಚ್. ಎಸ್. ಭೋಜ್ಯಾನಾಯ್ಕ್, ಹಿಂದಿನ ಕುಲಸಚಿವರು ಹಾಗೂ ಶ್ರೀ ಚಂದ್ರ ಯಾನೆ ಕಟ್ಟೆ ಚಂದ್ರು ಸ್ವಚ್ಚತಾ ಸಿಬ್ಬಂದಿ ಈ ಮೂರು ಜನರ ಹೆಸರನ್ನು ಪ್ರಸ್ತಾಪಿಸಿರುವುದನ್ನು ಸಭೆಯ ಗಮನಕ್ಕೆ ತಂದು ನಿರ್ಣಯಕ್ಕಾಗಿ ಮಂಡಿಸಲಾಗಿದೆ ಎಂದರು.

ಸದಸ್ಯರಾದ ಶ್ರೀ ರಾಮಲಿಂಗಪ್ಪ ಹೆಚ್ ಇವರು ಮಾತನಾಡುತ್ತಾ, ಈ ಮೂರೂ ಜನ ಅಧಿಕಾರಿ ಮತ್ತು ಸಿಬ್ಬಂದಿಗಳು ಅಂದಿನ ಕುಲಪತಿಗಳ ಆದೇಶದ ಮೇರೆಗೆ ಹಾಗೂ ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಕಾರ್ಯನಿರ್ವಹಿಸಿರುವುದರಿಂದ ಇವರ ಮೇಲೆ ಯಾವುದೇ ತಪ್ಪುಗಳಿಲ್ಲವೆಂದು ತಿಳಿಸಿದರು.



Scanned with CamScanner

ಕುಲಸಚಿವರು ಮಾತನಾಡುತ್ತಾ, ಸದರಿಯವರನ್ನು ಕರೆಸಿ ವಿಚಾರಿಸಲಾಗಿ, ಅಕ್ರಮ ಮರ ಕಡಿತಲೆಯಾಗುತ್ತಿದ್ದುದನ್ನು ಪತ್ತೆ ಹಚ್ಚಿ ತಾವೇ ಅರಣ್ಯ ಇಲಾಖೆಗೆ ಒಪ್ಪಿಸಿರುವುದಾಗಿ ತಮ್ಮ ವಿವರಣೆ ನೀಡಿರುವುದಾಗಿ ಸಭೆಯ ಗಮನಕ್ಕೆ ತಂದರು.

**ನಿರ್ಣಯ:** ಚರ್ಚೆಯ ನಂತರ ಸರ್ಕಾರದ ಪತ್ರದಲ್ಲಿ ಸೂಚಿಸಿರುವಂತಹ ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಲು ಸಿಂಡಿಕೇಟ್ ಸಭೆಯು ಅನುಮತಿಸಿರುವುದಿಲ್ಲವೆಂದು ಸರ್ಕಾರಕ್ಕೆ ಪತ್ರ ಬರೆಯಲು ನಿರ್ಣಯಿಸಲಾಯಿತು.

**2021–ಸಿಂ–1.58 : ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು :**

**I ಶ್ರೀ ಧರ್ಮಪ್ರಸಾದ್ ಜಿ ಇವರು ಪ್ರಸ್ತಾಪಿಸಿದ ವಿಷಯಗಳು:**

(i). ಅತಿಥಿ ಉಪನ್ಯಾಸಕರುಗಳಿಗೆ ಒಟ್ಟು 11 ತಿಂಗಳ ವೇತನವನ್ನು ಪಾವತಿಸಲು ಈ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಲಾಗಿತ್ತು. ಆದರೆ ಅದು ನಡಾವಳಿಯಲ್ಲಿ 10 ತಿಂಗಳು ಎಂದು ದಾಖಲಾಗಿರುವುದನ್ನು ಪ್ರಸ್ತಾಪಿಸಿ 11 ತಿಂಗಳು ನೀಡಬೇಕೆಂದರು. ಇದಕ್ಕೆ ಉತ್ತರಿಸಿದ ಕುಲಪತಿಗಳು ಪ್ರಸ್ತುತ ಆರ್ಥಿಕ ವರ್ಷದಲ್ಲಿ ವಿಶ್ವವಿದ್ಯಾಲಯವು ತೀವ್ರ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವುದರಿಂದ ಹಣಕಾಸು ಪರಿಸ್ಥಿತಿಯನ್ನು ಗಮನಿಸಿ ಮುಂದಿನ ದಿನಗಳಲ್ಲಿ ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

(ii) ವಿಶ್ವವಿದ್ಯಾಲಯದ ಆವರಣದಲ್ಲಿನ ಬಿ.ಜಿ.ಎಸ್ ಶಾಲೆಗೆ ಈ ಹಿಂದಿನ ಸಿಂಡಿಕೇಟ್ ಸಭೆಯು 31ನೇ ಮೇ 2021ರವರೆಗೆ ಅವಕಾಶ ನೀಡಬೇಕೆಂದು ನಿರ್ಣಯಿಸಲಾಗಿದ್ದರೂ ಸಹ ಅವರಿಗೆ ಇದುವರೆಗೂ ಶಾಲಾ ಕೋಠಡಿಯನ್ನು ಒದಗಿಸಿರುವುದಿಲ್ಲವೆಂದರು.

ಇದಕ್ಕೆ ಉತ್ತರಿಸಿದ ಕುಲಸಚಿವರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಇವರಿಗೆ ಶಾಲಾ ಕೊಠಡಿ ಅಥವಾ ಶಾಲೆ ನಡೆಸಲು ಅನುಮತಿ ನೀಡಲು ಅವಕಾಶವಿರುವುದಿಲ್ಲವೆಂದರು. ಅಲ್ಲದೇ ಈ ಕುರಿತು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಸಹ ಪಡೆಯಲಾಗಿದೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಶ್ರೀ ಧರ್ಮಪ್ರಸಾದ್‌ರವರು ನ್ಯಾಯಾಲಯದ ತೀರ್ಪನ್ನು ಪರಿಶೀಲಿಸಲಾಗಿದೆ. ಇದು ನ್ಯಾಯಾಂಗ ನಿಂದನೆಯಾಗುವುದಿಲ್ಲವೆಂದು ತಿಳಿಸಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅವರಿಗೆ ಶಾಲೆ ನಡೆಸಲು ಅವಕಾಶ ಮಾಡಿಕೊಡಬೇಕೆಂದರು.

ಚರ್ಚೆಯ ಮಧ್ಯೆ ಪ್ರವೇಶಿಸಿ ಮಾತನಾಡಿದ ಕುಲಪತಿಗಳು ನಾನು ಮತ್ತು ಕುಲಸಚಿವರು ಸದರಿ ಶಾಲೆಯ ಆಡಳಿತ ಮಂಡಳಿಯವರೊಂದಿಗೆ ಚರ್ಚಿಸಿ ಶಂಕರಘಟ್ಟದಲ್ಲಿ ಯಾವುದಾದರೊಂದು ಕಟ್ಟಡವನ್ನು ತುರ್ತಾಗಿ ಬಾಡಿಗೆ ಪಡೆದು ಶಾಲೆಯನ್ನು ಮುಂದುವರೆಸಲು ಕ್ರಮಕೈಗೊಳ್ಳುವಂತೆ ತಿಳಿಸಿರುವುದಾಗಿ ಸಭೆಗೆ ವಿವರಿಸಿದರು ಹಾಗೂ ನ್ಯಾಯಾಲಯದ ತೀರ್ಪನ್ನು ಪರಿಶೀಲಿಸಿ ಅವಕಾಶವಿದ್ದಲ್ಲಿ ಅವಕಾಶ ನೀಡಲು ಪರಿಗಣಿಸಲಾಗುವುದು ಎಂದರು.

(iii) ಅತಿಥಿ ಉಪನ್ಯಾಸಕರುಗಳ ನೇಮಕಾತಿಯಲ್ಲಿ ಹೊಸಬರಿಗೆ ಹೆಚ್ಚು ಕಾರ್ಯಭಾರ ನೀಡಿ ಹಳಬರಿಗೆ ಕಡಿಮೆ ಕಾರ್ಯಭಾರ ನೀಡಿರುವುದನ್ನು ಸರಿಪಡಿಸುವಂತೆ ಕೋರಿದರು.

ಇದಕ್ಕೆ ಉತ್ತರಿಸಿದ ಕುಲಪತಿಗಳು ಅತಿಥಿ ಉಪನ್ಯಾಸಕ ಹುದ್ದೆಗೆ ನಿಯಮಾನುಸಾರ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ಸಂದರ್ಶನವನ್ನು ಏರ್ಪಡಿಸಿ ಯು.ಜಿ.ಸಿ ನಿಯಮಾನುಸಾರ ಅರ್ಹತೆ ಇರುವವರನ್ನು ಮೊದಲು ಪರಿಗಣಿಸಿ ಆಯ್ಕೆ ಮಾಡಲಾಗಿದ್ದು. ಆ ನಂತರದಲ್ಲಿ ಸರ್ಕಾರವು ಹಿಂದೆ ಕರ್ತವ್ಯ ನಿರ್ವಹಿಸಿದವರನ್ನು ಮುಂದುವರೆಸುವಂತೆ ಆದೇಶಿಸಿರುವುದನ್ನು ಸಭೆಯ ಗಮನಕ್ಕೆ ತಂದರು.



Scanned with CamScanner

ಕುಲಸಚಿವರು ಮಾತನಾಡುತ್ತಾ, ಆ ರೀತಿಯ ಕಾರ್ಯಭಾರ ವ್ಯತ್ಯಾಸವಾಗಿದ್ದಲ್ಲಿ ಪರಿಶೀಲಿಸಿ ಸಾಧ್ಯವಾದಷ್ಟು ಸರಿಪಡಿಸಲು ಕ್ರಮವಹಿಸುವುದಾಗಿ ತಿಳಿಸಿದರು.

(iv) ಏಜೆನ್ಸಿ ಸಿಬ್ಬಂದಿಗಳಿಗೆ ಪ್ರತಿ ತಿಂಗಳು ವೇತನವನ್ನು ವಿಳಂಬವಿಲ್ಲದೇ ಪಾವತಿಸಬೇಕು, ಏಜೆನ್ಸಿಯವರು ಪ್ರತಿ ತಿಂಗಳು ವೇತನ ಪಾವತಿಸಿದ ವಿವರಗಳ ಪಟ್ಟಿಯನ್ನು (Pay Slip) ನೀಡಬೇಕು, ಪ್ರತಿ ತಿಂಗಳು ವೇತನವನ್ನು ನೇರವಾಗಿ ಅವರ ಖಾತೆಗೆ ಜಮಾ ಆಗುವಂತೆ ನೋಡಿಕೊಳ್ಳಬೇಕು ಹಾಗೂ ಸಮವಸ್ತ್ರಕ್ಕೆಂದು ಹಣ ಕಟಾವಣೆಯಾಗಿರುವುದನ್ನು ಅವರಿಗೆ ಹಿಂತಿರುಗಿಸಬೇಕೆಂದರು.

ಇದಕ್ಕೆ ಉತ್ತರಿಸಿ ಕುಲಸಚಿವರು ಈಗಾಗಲೇ ಎಲ್ಲಾ ಏಜೆನ್ಸಿ ಸಿಬ್ಬಂದಿಗಳಿಗೆ ವೇತನವನ್ನು ಪಾವತಿಸಲಾಗಿದೆ. ಹಾಗೂ ಉಳಿದ ವಿಷಯಗಳ ಬಗ್ಗೆ ಕ್ರಮಕೈಗೊಳ್ಳುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗುವುದು ಎಂದರು.

(v) ವಾಹನ ಚಾಲಕರುಗಳನ್ನು ಖಾಯಂಗೊಳಿಸಲು ಕೂಡಲೇ ಪರಿನಿಯಮವನ್ನು ರಚಿಸಿ ಅನುಮೋದನೆಗೆ ಮಂಡಿಸಿ ಕ್ರಮಕೈಗೊಳ್ಳಬೇಕು ಎಂದರು.

ಇದಕ್ಕೆ ಉತ್ತರಿಸಿದ ಕುಲಸಚಿವರು ಈಗಾಗಲೇ ಈ ಪ್ರಕ್ರಿಯೆ ಜಾರಿಯಲ್ಲಿದ್ದು ಪರಿನಿಯಮ ರಚನಾ ಸಮಿತಿಗೆ ಇದನ್ನು ಕೂಡಲೇ ಸಿದ್ಧಪಡಿಸುವಂತೆ ಸೂಚಿಸಲಾಗಿದೆ ಎಂದರು. ಇದಕ್ಕೆ ಉತ್ತರಿಸಿದ ಪರಿನಿಯಮ ಸ್ಥಾಯಿ ಸಮಿತಿಯ ಅಧ್ಯಕ್ಷರೂ ಆದ ಪ್ರೊ. ವಿ.ಕೃಷ್ಣ ಇವರು ಸದರಿ ಪರಿನಿಯಮವನ್ನು ರಚಿಸಲು ಪೂರಕವಾದ ಕೆಲವು ಮಾಹಿತಿಗಳನ್ನು ಕಲೆಹಾಕಲಾಗುತ್ತಿದ್ದು ಮುಂದಿನ ಸಿಂಡಿಕೇಟ್ ಸಭೆಗೆ ಪರಿನಿಯಮವನ್ನು ಅನುಮೋದನೆಗೆ ಮಂಡಿಸಲು ಕ್ರಮಕೈಗೊಳ್ಳಲಾಗುವುದು ಎಂದರು.

**ನಿರ್ಣಯ:** ಮಾಹಿತಿಯನ್ನು ಒಪ್ಪಲಾಯಿತು.

**2.** ಡಿ.ವಿ.ಎಸ್.ಸಂಜೆ ಕಾಲೇಜಿನ ವಿದ್ಯಾರ್ಥಿಗಳ ಶುಲ್ಕದಲ್ಲಿ ವಿನಾಯಿತಿ ನೀಡುವ ಕುರಿತು.

ವಿಷಯ ಪ್ರಸ್ತಾಪಿಸಿದ ಶ್ರೀ ಧರ್ಮಪ್ರಸಾದ್‌ರವರು, ಡಿ.ವಿ.ಎಸ್.ಸಂಜೆ ಕಾಲೇಜಿನಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳು ಹಗಲಿನಲ್ಲಿ ಆಟೋ ಚಾಲನೆ ಇತ್ಯಾದಿ ಬೇರೆ ಕೆಲಸವನ್ನು ನಿರ್ವಹಿಸಿ ಅದರಿಂದ ಬರುವ ಆದಾಯದಲ್ಲಿ ಶುಲ್ಕವನ್ನು ಪಾವತಿಸಲು ಸಾಧ್ಯಾವಾಗುವುದಿಲ್ಲವಾದ್ದರಿಂದ ಶುಲ್ಕದಲ್ಲಿ ವಿನಾಯಿತಿ ನೀಡಲು ನಿರ್ಣಯ ಕೈಗೊಳ್ಳುವಂತೆ ಸಭೆಯನ್ನು ಕೋರಿದರು.

ಇದಕ್ಕೆ ಉತ್ತರಿಸಿದ ಕುಲಪತಿಗಳು ಸದರಿ ಕಾಲೇಜಿನ ಸಂಸ್ಥೆಯವರು ಅರ್ಹತಾ ಪ್ರಮಾಣ ಪತ್ರದ ಶುಲ್ಕದಲ್ಲಿ ಮಾತ್ರ ಶೇ 50ರಷ್ಟು ವಿನಾಯಿತಿ ನೀಡುವಂತೆ ಕೋರಿರುವುದಾಗಿ ಸಭೆಯ ಗಮನಕ್ಕೆ ತಂದರು. ಕುಲಸಚಿವರು ಮಾತನಾಡುತ್ತಾ, ಅರ್ಹತಾ ಶುಲ್ಕ ದುಬಾರಿಯಾಗಿರುವುದಿಲ್ಲವಾದ್ದರಿಂದ ಈ ಶುಲ್ಕದಲ್ಲಿ ವಿನಾಯಿತಿ ನೀಡುವುದು ಸಾಧುವಲ್ಲವೆಂದರು.

ಬಹುತೇಕ ಸದಸ್ಯರುಗಳು ಕಾಲೇಜಿನ ವಿದ್ಯಾರ್ಥಿಗಳ ಅರ್ಹತಾ ಪ್ರಮಾಣ ಪತ್ರವನ್ನು ನೀಡಲು ಪಡೆಯುತ್ತಿರುವ ಶುಲ್ಕವನ್ನು ಮನ್ನಾ ಮಾಡುವಂತೆ ಕೋರಿದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ಪ್ರಸ್ತುತ ವಿಶ್ವವಿದ್ಯಾಲಯದ ಅರ್ಹತಾ ಪ್ರಮಾಣ ಪತ್ರವನ್ನು ನೀಡಲು ಪಡೆಯಲಾಗುತ್ತಿರುವ ರೂ.370–00 ಶುಲ್ಕವನ್ನು ಕೈ ಬಿಡಲು ನಿರ್ಣಯಿಸಲಾಯಿತು.

**3.** ಎಸ್.ಎಂ.ಆರ್ ಕಾಲೇಜನ್ನು ವಿಶ್ವವಿದ್ಯಾಲಯದ ಘಟಕ ಕಾಲೇಜು ಎಂದು ಘೋಷಿಸಿ ಆದೇಶ ಹೊರಡಿಸುವ ಕುರಿತು.

ವಿಷಯವನ್ನು ಮಂಡಿಸಿ ಮಾತನಾಡಿದ ಶ್ರೀ ಧರ್ಮಪ್ರಸಾದ್ ಜಿ ರವರು ಈಗಾಗಲೇ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಸದರಿ ಕಾಲೇಜನ್ನು ಘಟಕ ಕಾಲೇಜು ಎಂದು ಪರಿಗಣಿಸಿ ಅಲ್ಲಿನ ಸಿಬ್ಬಂದಿಗಳಿಗೆ ಎಲ್ಲಾ ಸೇವಾ ಸೌಲಭ್ಯಗಳನ್ನು ಒದಗಿಸಲು ತೀರ್ಪು ನೀಡಿರುವುದರಿಂದ ಅದರಂತೆ ಕಾಲೇಜನ್ನು ಘಟಕ ಕಾಲೇಜು ಎಂದು ಆದೇಶ ಹೊರಡಿಸಲು ಕೋರಿದರು.



Scanned with CamScanner

ಇದಕ್ಕೆ ಉತ್ತರಿಸಿದ ಕುಲಸಚಿವರು ನ್ಯಾಯಾಲಯದ ತೀರ್ಪನ್ನು ಪರಿಶೀಲಿಸಲಾಗಿದೆ. ಆದರೆ ಸದರಿ ಕಾಲೇಜನ್ನು ವಿಶ್ವವಿದ್ಯಾಲಯಕ್ಕೆ ಸರ್ಕಾರವು ಆದೇಶ ಹೊರಡಿಸಿ ಹಸ್ತಾಂತರಿಸಿರುವುದರಿಂದ ನಿಯಮಾನುಸಾರ ಆದೇಶ ಹೊರಡಿಸಲು ಸರ್ಕಾರವೇ ಸಕ್ಷಮ ಪ್ರಾಧಿಕಾರ ಆಗಿರುವುದರಿಂದ ಈ ಬಗ್ಗೆ ಸರ್ಕಾರವು ಆದೇಶ ಹೊರಡಿಸಬೇಕಾಗಿರುತ್ತದೆ ಎಂದರು. ಇದಕ್ಕೆ ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ ರವರು ನ್ಯಾಯಾಲಯವೇ ತೀರ್ಪು ನೀಡಿರುವುದರಿಂದ ಇದರ ಆಧಾರದ ಮೇಲೆ ವಿಶ್ವವಿದ್ಯಾಲಯವೇ ಕ್ರಮಕೈಗೊಳಬಹುದು ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಕುಲಸಚಿವರು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ ಪ್ರಕಾರ ಯಾವುದೇ ಕಾಲೇಜನ್ನು ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸುವ ಪ್ರಕ್ರಿಯೆಯು ಸರ್ಕಾರದಿಂದಲೇ ಆಗಬೇಕಿರುವುದರಿಂದ ನ್ಯಾಯಾಲಯದ ತೀರ್ಪನ್ನು ಸರ್ಕಾರಕ್ಕೆ ಕಳುಹಿಸಿಕೊಡಲಾಗುವುದು ಎಂದರು.

**ನಿರ್ಣಯ:** ಎಸ್.ಎಂ.ಆರ್ ಕಾಲೇಜಿನ ಕುರಿತು ನ್ಯಾಯಾಲಯವು ನೀಡಿರುವ ತೀರ್ಪಿನ ಕುರಿತು ಸರ್ಕಾರದ ಮಾರ್ಗದರ್ಶನ ಕೋರಲು ನಿರ್ಣಯಿಸಲಾಯಿತು.

II **ಶ್ರೀ ರಾಮಲಿಂಗಪ್ಪ ಹೆಚ್ ಇವರು ಪ್ರಸ್ತಾಪಿಸಿದ ವಿಷಯಗಳು:**

1. ಅಧ್ಯಾಪಕೇತರ ಸಿಬ್ಬಂದಿಗಳ ಜ್ಯೇಷ್ಠತಾ ಪಟ್ಟಿಯನ್ನು ಈಗಾಗಲೇ ಜಾರಿಗೊಳಿಸಿದ್ದು, ಇದರಂತೆ ಬಡ್ತಿ ಹೊಂದಿದ ನೌಕರರುಗಳಿಗೆ ವೇತನ ನಿಗದಿಗೊಳಿಸಬೇಕು ಎಂದರು.

ಇದಕ್ಕೆ ಉತ್ತರಿಸಿದ ಕುಲಸಚಿವರು ದಿನಾಂಕ:31-03-2017 ಕ್ಕಿದ್ದಂತೆ ಪ್ರಕಟಿಸಲಾದ ಜ್ಯೇಷ್ಠತಾ ಪಟ್ಟಿಯಲ್ಲಿನ ಲೋಪದೋಷಗಳನ್ನು ಸರಿಪಡಿಸಲು ಸಿಂಡಿಕೇಟ್ ಸಭೆಯ ನಿರ್ಣಯದಂತೆ ಪರಿಣಿತರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯು ಈಗಾಗಲೇ ಕಾರ್ಯಾರಂಭಮಾಡಿದ್ದು ಈ ಪ್ರಕ್ರಿಯೆ ಪೂರ್ಣಗೊಂಡ ನಂತರ ನಿಯಮಾನುಸಾರ ಬಡ್ತಿ ಮತ್ತು ವೇತನ ನಿಗದಿಗೆ ಕ್ರಮವಹಿಸಲಾಗುವುದು ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಶ್ರೀ ರಾಮಲಿಂಗಪ್ಪ ಹೆಚ್ ರವರು ಈಗ ಪ್ರಕಟಿಸಿರುವ ಜ್ಯೇಷ್ಠತಾ ಪಟ್ಟಿಯನ್ನು ಯಥಾವತ್ತಾಗಿ ಜಾರಿ ಮಾಡಿ ಅದರಂತೆ ಕ್ರಮವಹಿಸಲು ಕೋರಿದರು. ಇದಕ್ಕೆ ಉತ್ತರಿಸಿದ ಕುಲಸಚಿವರು ಸಿಂಡಿಕೇಟ್ ಸಭೆಯು ಜ್ಯೇಷ್ಠತಾ ಪಟ್ಟಿಯಲ್ಲಿನ ನ್ಯೂನತೆಯನ್ನು ಸರಿಪಡಿಸಲು ಸಮಿತಿಯನ್ನು ರಚಿಸಲು ನಿರ್ಣಯಕೈಗೊಂಡಿದ್ದು. ಈಗ ಅದನ್ನು ಹೊರತು ಪಡಿಸಿ ಬೇರೆ ರೀತಿಯ ಕ್ರಮಕೈಗೊಳ್ಳಲು ಸಾಧ್ಯವಾಗುವುದಿಲ್ಲವೆಂದರು.

ಸದಸ್ಯರಾದ ಶ್ರೀ ಧರ್ಮಪ್ರಸಾದ್ ಜಿ ರವರು ಮಾತನಾಡುತ್ತಾ, ಅನೇಕ ಹುದ್ದೆಗಳಿಗೆ ಪ್ರಭಾರ ವ್ಯವಸ್ಥೆ ಮಾಡಿ ಭತ್ಯೆಗಳನ್ನು ಪಾವತಿಸುತ್ತಿದ್ದು ಇದನ್ನು ತಪ್ಪಿಸಲು ಕೂಡಲೇ ಬಡ್ತಿ ನೀಡುವುದು ಸೂಕ್ತವೆಂದರು.

ಸದಸ್ಯರಾದ ಶ್ರೀ ಹೆಚ್.ಬಿ. ರಮೇಶ್ ಬಾಬುರವರು ಮಾತನಾಡುತ್ತಾ, ಬಡ್ತಿ ನೀಡಿದ ಎಲ್ಲಾ ನೌಕರರುಗಳಿಗೆ ಕೂಡಲೇ ವೇತನ ನಿಗದೀಕರಣ ಮಾಡಬೇಕು ಎಂದರು.

ಕುಲಸಚಿವ(ಮೌಲ್ಯಮಾಪನ)ರಾದ ಪ್ರೊ. ಪಿ. ಕಣ್ಣನ್ ಇವರು ಮಾತನಾಡುತ್ತಾ, ನೌಕರರಿಗೆ ಬಡ್ತಿ ನೀಡಿದ ಮೇಲೆ ವೇತನ ನಿಗದೀಕರಣ ಮಾಡಬೇಕು ಎಂದರು.

**ನಿರ್ಣಯ:** ಸುದೀರ್ಘ ಚರ್ಚೆಯ ನಂತರ ದಿನಾಂಕ:31-03-2017 ಕ್ಕಿದ್ದಂತೆ ದಿನಾಂಕ:29-01-2020 ರಂದು ಪ್ರಕಟಿಸಿರುವ ಜ್ಯೇಷ್ಠತಾ ಪಟ್ಟಿಯನುಸಾರ ಬಡ್ತಿ ನೀಡಲಾದ ಎಲ್ಲಾ ಸಿಬ್ಬಂದಿಗಳಿಗೆ ಕೂಡಲೇ ವೇತನ ನಿಗದೀಕರಣ ಮಾಡಲು ಕುಲಪತಿಗಳು ರೂಲಿಂಗ್ ನೀಡಿದರು ಹಾಗೂ ನಂತರದ ಹಂತದಲ್ಲಿ ಅಥವಾ ಸಮಾನಾಂತರವಾಗಿ 2018, 2019 ಮತ್ತು 2020ರ ಪಟ್ಟಿಯನ್ನು ತಯಾರಿಸಲು ಎಲ್ಲಾ ಸದಸ್ಯರುಗಳ ಕೋರಿಕೆ ಮೇರೆಗೆ ಕ್ರಮಕೈಗೊಳ್ಳಲು ಮಾನ್ಯ ಕುಲಪತಿಗಳು ನಿರ್ಣಯ ನೀಡಿದರು.



Scanned with CamScanner

**2.** ವಿಲೀನೀಕರಣಗೊಂಡ ಅಧ್ಯಾಪಕೇತರ ಸಿಬ್ಬಂದಿಗಳ ಸೇವಾ ಸೌಲಭ್ಯಗಳ ಕುರಿತು ಈ ಹಿಂದೆ ನಡೆದ ಸಿಂಡಿಕೇಟ್ ಸಭೆಯು ಕೈಗೊಂಡ ನಿರ್ಣಯವನ್ನು ಇದುವರೆಗೂ ಕಾರ್ಯಗೊತಗೊಳಿಸದಿರುವ ಕುರಿತು ಪ್ರಸ್ತಾಪಿಸಿ ಕೂಡಲೇ ಕ್ರಮಕೈಗೊಳ್ಳುವಂತೆ ಕೋರಿದರು.

ಇದಕ್ಕೆ ಉತ್ತರಿಸಿದ ಕುಲಸಚಿವರು ಸದರಿ ಪ್ರಕ್ರಿಯೆಯು ಈಗಾಗಲೇ ಪ್ರಗತಿಯಲ್ಲಿದ್ದು ಆದಷ್ಟು ಬೇಗ ಕ್ರಮಕೈಗೊಳ್ಳಲಾಗುವುದು ಎಂದರು.

ನಿರ್ಣಯ: ವಿಲೀನೀಕರಣಗೊಂಡ ನೌಕರರ ಸೇವಾ ಸೌಲಭ್ಯ ವಿಸ್ತರಿಸುವ ಕುರಿತಾದ ಸಿಂಡಿಕೇಟ್ ನಿರ್ಣಯವನ್ನು ಆದಷ್ಟು ಬೇಗ ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಬೇಕೆಂದು ನಿರ್ಣಯಿಸಲಾಯಿತು.

ಸಭೆಯ ಕೊನೆಯಲ್ಲಿ ಕುಲಪತಿಗಳು ವಿಶ್ವವಿದ್ಯಾಲಯದ ಸರ್ವತೋಮುಖ ಅಭಿವೃದ್ದಿಗೆ ಎಲ್ಲಾ ಪ್ರಾಧಿಕಾರಗಳ ಸದಸ್ಯರುಗಳ ಸಲಹೆ ಮತ್ತು ಸಹಕಾರ ಅಗತ್ಯವಾಗಿರುವುದರಿಂದ ವಿಶ್ವವಿದ್ಯಾಲಯದ ಅಭಿವೃದ್ದಿಗೆ ಕೈಗೊಳ್ಳಬೇಕಾದ ಕ್ರಮದ ಕುರಿತು ಸೂಕ್ತ ಸಲಹೆ ಮತ್ತು ವರದಿಯನ್ನು ನೀಡಲು ಈ ಕೆಳಕಂಡಂತೆ ಸಮಿತಿಗಳನ್ನು ರಚಿಸಲು ಉದ್ದೇಶಿಸಲಾಗಿದೆ. ಇದನ್ನು ಎಲ್ಲಾ ಸದಸ್ಯರುಗಳು ಒಪ್ಪಿ ಕಾರ್ಯಪ್ರವೃತ್ತರಾಗಬೇಕೆಂದರು.

**1. ಹಣಕಾಸು ವಿಷಯದ ಕುರಿತು ಸಮಿತಿ.**

1. ಶ್ರೀ ಧರ್ಮಪ್ರಸಾದ್ ಜಿ.
2. ಹಣಕಾಸು ಅಧಿಕಾರಿಗಳು.
3. ಶ್ರೀ ರಾಮಲಿಂಗಪ್ಪ ಹೆಚ್.
4. ಶ್ರೀ ಎಸ್. ಆರ್. ನಾಗರಾಜ್.
5. ಶ್ರೀ ಬಿ. ನಿರಂಜನ ಮೂರ್ತಿ.

**2. ಶಿವಮೊಗ್ಗದ ಬಿ.ಹೆಚ್. ರಸ್ತೆಯಲ್ಲಿರುವ ಮೈಸೂರು ಬೆಂಕಿಪೊಟ್ಟಣ ಕಾರ್ಖಾನೆಯ ಜಾಗವನ್ನು ವಿಶ್ವವಿದ್ಯಾಲಯವು ಪಡೆಯುವುದರ ಕುರಿತು.**

1. ಶ್ರೀ ಹೆಚ್. ಬಿ. ರಮೇಶ್ ಬಾಬು
2. ಶ್ರೀ ಬಳ್ಳೇಕೆರೆ ಸಂತೋಷ್
3. ಶ್ರೀ ರಾಮಲಿಂಗಪ್ಪ. ಹೆಚ್.
4. ಶ್ರೀ ಎಸ್. ಆರ್. ನಾಗರಾಜ್.
5. ಶ್ರೀ ಕರಣಾಕರ. ಬಿ.

**3. ಸಹ್ಯಾದ್ರಿ ಕಾಲೇಜುಗಳ ಅಭಿವೃದ್ದಿ ಕುರಿತು.**

1. ಶ್ರೀ ಬಳ್ಳೇಕೆರೆ ಸಂತೋಷ್.
2. ಶ್ರೀ ರಾಮಲಿಂಗಪ್ಪ. ಹೆಚ್.
3. ಶ್ರೀ ಹೆಚ್. ಬಿ. ರಮೇಶ್ ಬಾಬು.
4. ಶ್ರೀ ಕರುಣಾಕರ. ಬಿ.
5. ಶ್ರೀ ಕೆ. ವಿ. ಸತೀಶ್ ಪೈ.

**4. ಕೆಳದಿ ವಸ್ತು ಸಂಗ್ರಹಾಲಯ ಹಾಗೂ ಸಂಶೋಧನ ಕೇಂದ್ರ ಅಭಿವೃದ್ಧಿ ಕುರಿತು.**

1. ಶ್ರೀಮತಿ ಕಿರಣ್ ರವೀಂದ್ರ ದೇಸಾಯಿ.
2. ಡಾ. ಹೆಚ್. ರಾಜೇಶ್ವರಿ.
3. ಡಾ. ಯುವರಾಜ ಬಿ. ಹೆಚ್.
4. ಶ್ರೀ ಕರಣಾಕರ. ಬಿ.
5. ಶ್ರೀ ಎಸ್. ಆರ್. ನಾಗರಾಜ್.



Scanned with CamScanner

5. ಶ್ರೀಮದ್ ರಂಭಾಪುರಿ ಕಲಾ ಮತ್ತು ವಾಣಿಜ್ಯ ಕಾಲೇಜು ಕುರಿತು.
   1. ಶ್ರೀ ಧರ್ಮಪ್ರಸಾದ್.ಜಿ.
   2. ಶ್ರೀ ಕರುಣಾಕರ ಬಿ.
   3. ಶ್ರೀ ಕೆ. ವಿ. ಸತೀಶ್ ಪೈ.
   4. ಶ್ರೀ ಎನ್. ಆರ್. ಮಂಜುನಾಥ.
   5. ಶ್ರೀ ಹೆಚ್. ಬಿ. ರಮೇಶ್ ಬಾಬು.

ವಿಶ್ವವಿದ್ಯಾಲಯದಲ್ಲಿ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ, ಕೌಶಲ್ಯ ಕಾರ್ಯಕ್ರಮ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ Expression of Interest ಕರೆಯಲು ಮಾನ್ಯ ಕುಲಪತಿಗಳು ಸಭೆಯ ಅನುಮತಿಯನ್ನು ಕೋರಿದರು ಇದಕ್ಕೆ ಸಭೆಯು ಅನುಮೋದಿಸಿತು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

ಸಹಿ/-
ಕುಲಪತಿಗಳು



Scanned with CamScanner